ಅಶ್ವತ್ಥಾಮನ್

ಪಾತ್ರಂಗಳ್

ರುದ್ರನ್
ಕೃಷ್ಣನ್
ಅಶ್ವತ್ಥಾಮನ್
ಭಾರ್ಗವಿ
ರುದ್ರಶಕ್ತಿ
ದೂತನ್
ಏಕಲವ್ಯನ್
ಭೀಮನ್
ಕನ್ನಡದ ಬೇಡರ ಮೇಳಂ

ಗ್ರೀಕ್ ಮಹಾಕವಿ ಸಾಫೋಕ್ಲೀಸಿನ "ಏಜಾಕ್ಸ್" ಎಂಬ ರುದ್ರನಾಟಕವನ್ನು ಆಶ್ರಯಿಸಿ, ಮಹಾಭಾರತದ ಸೌಪ್ತಿಕಪರ್ವದ ಕಥೆಯನ್ನು ಅದರೊಡನೆ ಹೊಂದಿಸಿಕೊಂಡು, ಈ ನಾಟಕವನ್ನು ರಚಿಸಿರುತ್ತದೆ. ಇದರಲ್ಲಿ ದ್ರೋಣನ ತಾಯಿ ಭಾರ್ಗವಿ ಪರಶುರಾಮನ ತಂಗಿಯೆಂದೂ, ದ್ರೋಣಾಶ್ವತ್ಥಾಮರು ಕನ್ನಡನಾಡಿನ ಬನವಾಸಿ ಪ್ರಾಂತದಿಂದ ಕೌರವನಾ ಸ್ಥಾನಕ್ಕೆ ಹೋಗಿ ಸೇರಿದರೆಂದೂ, ಇದೇ ಪ್ರಾಂತಕ್ಕೆ ಸೇರಿದ ಏಕಲವ್ಯನು ತನ್ನ ಗುರುಗಳ ಬೆಂಬಲವಾಗಿ ತನ್ನ ಬೇಡರ ಸೈನ್ಯವನ್ನು ತೆಗದುಕೊಂಡು ಹೋಗಿ ಭಾರತ ಯುದ್ಧದಲ್ಲಿ ಕಾದಿದನೆಂದೂ ಕಲ್ಪಿಸಿಕೊಂಡಿದೆ. ಈ ಬೇಡರೇ ಈ ನಾಟಕದಲ್ಲಿ ಮೇಳದವರು.

[ಕುರುಕ್ಷೇತ್ರದೊಳ್ ಅಶ್ವತ್ಥಾಮನ ಬೀಡ ಮುಂದೆ ರುದ್ರನ್, ಪಜ್ಜೆಯಱಸುತೆ ಕೃಷ್ಣನ್]

ರುದ್ರನ್ : ವಾಸುದೇವ!
ಕೃಷ್ಣನ್ : ಭಗವನ್!
ರುದ್ರನ್: ಏಗಳುಂ ನೀನ್, ನೋಟ್ಪೆನ್,
ಅಱಿಗುಲಿಗಳನ್ ಮುಱಿವ ನೋಂಪಿಯನ್ ನೋಂತಿರ್ಪೆ.
ಈಗಳ್ ಅಶ್ವತ್ಥಾಮನ್ ಇರ್ಪ ಕಡೆವೀಡೆಯ್ದಿ,
ಪೊಸಪಜ್ಜೆಗಳನ್ ಅಳೆದು, ಇಣಿಕಿಣಿಕಿ, ಒಳಗಿರ್ಪನ್
ಇಲ್ಲಮೆಂದಾರಯ್ದುದೇನ್ ಮಾಟ್ಪೆ? ಕಂಪುವಿಡಿ
ದಿಂತು ಬರ್ಕುಂ ಬಿಡದೆ ಬೇಂಟೆನಾಯ್! ಎನಗಱಿಪು
ಕಾರ್ಯಮನ್. ನೀನ್ ಪ್ರಿಯನ್ ನಮಗೆ.
ಕೃಷ್ಣನ್ : ಎನ್ನೊಡೆಯ,
ಅಮರರೊಳ್ ನನಗೆ ಪರಮಪ್ರೇಮಿ, ಓ ರುದ್ರ,
ನಿನ್ನಾತ್ಮಮ್ ಎನ್ನುಸಿರ್; ಜಯಭೇರಿ ನಿನ್ನ ದನಿ.
ನಿನ್ನೊಳ್ ಆಲೋಚಿಸದೆ ನಾನ್ ತೊಡಗಿದುದುಮ್ ಉಂಟೆ?
ಆಲಿಪುದು.–ಈ ಇರುಳ್ ನಡೆದುದೊಂದದ್ಭುತಂ.
ಪಟ್ಟ ಪಡೆ ಪಟ್ಟಂತೆ ಪೊಯ್ದತ್ತು. ಪಾಯ್ದತ್ತು
ಭೂತಮೆಂಬರ್ ಕೆಲರ್; ಮತ್ಸರದ ಕೌರವನ
ಪ್ರೇತಮೆಂಬರ್ ಕೆಲರ್. ಪಲಪಲವು ಕಳವಳಂ.
ಅರುಮ್ ಇಂತೆಂದಱಿಯರ್. ಇದಱ ತಳಮನ್ ಪಡಿಯೆ
ಬೆದಕುತಿರೆ, ಕಾಪಿನಾಳ್ ಒರ್ವನ್ ಎನ್ನನ್ ಕೂಗಿ,
ನಡುನಡುಗುತಮಮ! ಭೈರವರೂಪಂ!–ಆ ದೆಸೆಯೆ!

ರಕ್ತಾಭಿಷೇಕಂ! ಅಶ್ವತ್ಥಾಮನನ್ ಪೋಲ್ತುಂ,
ಅದೊ ಪರಿಗುಂ ಎಂದನ್. ಒಡನೆ ಬೆಂಬತ್ತಿದೆನ್.
ಒರ್ಮೆ ಕಾಣ್ಬುದು ಪಜ್ಜೆ, ಒರ್ಮೆ ಕಾಣದು, ಪೆರ್ಮೆ,
ನಿನ್ನ ದರ್ಶನಮ್ ಆಯ್ತು; ಜಯಮ್ ಆಯ್ತು ಇನ್ನೆನಗೆ.
ನೇರಮೋ ಈ ಬೇಂಟೆ?
ರುದ್ರನ್ : ನೇರಂ. ಆತನದೆ
ಈ ಕೆಲಸಮ್; ಒಳಗಿರ್ಪನ್.
ಕೃಷ್ಣನ್ : ಏಕೆ ಕಯ್ಯಿಟ್ಟನೋ
ಇಂತಪ್ಪ ಘೋರದೊಳ್!
ರುದ್ರನ್ : ಕ್ರೋಧಾತ್ಮಪರವಶನ್!
ತನ್ನನಾಳ್ದನ ಕೊಲೆಯ ಮಾನಭಂಗಕೆ ಮುಳಿದು
ಪಾಂಡವಧ್ವಂಸಮನ್ ಮಾಡಿ ಮೆಚ್ಚಿಪೆನೆಂದು
ಸಾಱಿದನ್, ಕೈಮುಟ್ಟಿ, ಪ್ರಿಯತಮಸ್ವಾಮಿಯೊಳ್.
ಕೃಷ್ಣನ್ : ಒಱಗಿರ್ದ ವೀರರನ್ ಕೊಲ್ವುದೇನ್? ಅದಱೊಳಂ
ಪಶುಗಳನ್? ಪೆಂಡಿರನ್? ಮಕ್ಕಳನ್?
ರುದ್ರನ್ : ಇಱಿದಿಱಿದು
ನಿಮ್ಮೆಲ್ಲರನ್ ಕೊಂದೆನೆಂಬುದೇ ಅವನೆಣಿಕೆ.
ಕೃಷ್ಣನ್ : ಆ ರೌದ್ರಖಡ್ಗದಿನ್ ಅದೆಂತು ನಾಮ್ ಬರ್ದುಕಿದೆವು?
ಆರ್ ತಡೆದರ್ ಆ ಕೊಲೆಯ ಕಯ್ಯನ್?
ರುದ್ರನ್ : ಕೇಳ್, ಪೇೞ್ವೆನ್.
ನೇಸಱೊಡನಾ ಕೌರವನ್ ಮುೞುಗೆ, ನಿಡುಪೊೞ್ತು ಪಕ್ಕದೊಳ್ ಕುಳ್ತು,
ದುಃಖದೊೞ್ಕನ್ ನುಂಗಿ, ಕಟ್ಟೊಲ್ಮೆಯಾಳ್ದಂಗೆ ಭಕ್ತಿಯಿನ್ ಕಡೆಗೆ
ಕಣ್ಮುಚ್ಚೆ, ಅಡಿಗಡಿಗೆ ಪಲ್ಗಡಿದು, ತನ್ನ ಬೀಡನ್ ಪೊಕ್ಕು, ಕೆಳರ್ದು,
ಬಿಲ್ಲನ್ ಒರ್ಕಡೆ ಬಿಸುಟು, ಒಱೆಯಿಂದಮ್ ಇರ್ಬಾಯ ಖಡ್ಗಮನ್ ಪಿರಿದು,
ನಿಟ್ಟೋಟದಿನ್ ಪರಿದು. ನಿಶೆಯೊಳಗೆ ನಿಮ್ಮ ಪಾಳೆಯದೊಳಗೆ ನೆಗೆದನ್.
ಕಾಣಿಸಿದೆನ್ ಆಗಳ್ ಆನ್. ಪ್ರಿಯವೀರ, ದಾೞಿಯೇನ್? ವರಮಾವುದೀವೆನ್?
ಪಾಂಡವರ ಲೋಕಕೆನ್ನಿನ್ ಪ್ರಳಯಮೆಂದನ್.–ಕೆಲರ್ ಉೞಿದು, ಎಂದೆನ್.
ನೋಡುತಿರು, ನೋಡುತಿರು, ಎಲೆ ರುದ್ರ, ದೂರದೊಳ್ ನೋಡುತಿರು, ವೀರ್ಯಂ
ಮಾನುಷಮ್ ಅದೆಂತಿರ್ಕುಮೆಂಬುದನ್!–ಮದಿಸಿ ತಾನ್ ನಕ್ಕನ್; ಆನ್ ನಕ್ಕೆನ್.
ಮಾಯಮನ್ ಬೀಸಿದೆನ್. ಮರುಳ್ಗೊಂಡನನ್ ಮಾಡಿ, ಕಣ್ಮುಸುಕಿ, ತಿರಿಪಿ
ನಿಮ್ಮ ನಡುಬೀಡಿನಿನ್, ಪೊಱವೀಡ ಮಂದಿ ಇರ್ದೆಡೆಗಳೊಳೆ ಬಿಟ್ಟೆನ್.
ಆಹ, ಏನ್ ಆರ್ಭಟಂ! ಆಹ, ಏನ್ ಚೀಱಾಟಂ! ಏನ್ ಕೊಲ್ವ ಗರ್ವಂ!
ಮೇಲ್ಬಿಟ್ಟು ತುಱುಗಳನ್ ತಱಿದನ್. ಎಟ್ಟಿಟ್ಟಿ ಪೆಣ್ಗಳನ್ ಪೊೞ್ದನ್.
ದಾದಿಬೞಿ ಪಸುಳೆಯನ್ ಬಾಳ್ಮೊನೆಗೆ ಚುರ್ಚಿದನ್, ಬಿರ್ಚಿದನ್, ಕೊಯ್ದನ್.
ಗೂಡಾರಮನ್ ಕಿೞ್ತು, ಕಣ್ಪೊಸೆವ ಕಲಿಗಳನ್ ಮೂದಲಿಸಿ ಪೊಯ್ದನ್.
ನಾನ್ ಅವನ ಬೞಿ ಇರ್ದು, ಮರುಳ್ಗೆ ಧೂಪಂದೋಱುತಾ ಮನಃಕ್ಷೋಭಂ
ತೆರೆಮಸಗೆ ಊದಿದೆನ್–ಆಹ, ಧೃಷ್ಟದ್ಯುಮ್ನ, ಗುರುವನ್ ಇಂತಲ್ತೆ
ಕೊಱೆದು ಪುಣ್ಯಂಗೊಂಡೆ! ಎಂದೊಂದು ಕುದುರೆಯನ್ ಕೊರಲೌಂಕಿ ಕೊಱೆದನ್.
ಆನೆಯೊಂದನ್ ತಟ್ಟೆ, ಭೀಮಸೇನನೆ ಗೆತ್ತು, ರಾಕ್ಷಸಾ, ದೈತ್ಯಾ,
ಕೌರವೇಂದ್ರನ, ಬಿೞ್ದ ಚಕ್ರವರ್ತಿಯ ಮುಡಿಯನ್ ಒದೆದ ಕಾಲ್ ಎಲ್ಲಿ?
ಎಲ್ಲಿ ತೋಱೆಂದದಱ ಕಾಲ್ಮುಱಿದು, ಬಲ್ವೆಣನನ್ ಒದೆದೊದೆದು, ಬಿಸುಟನ್.

ಕಡೆಗೆಲ್ಲರನ್ ಕೊಂದೆನೆಂದೆಣಿಸಿ, ಕೌಂಕುಟೊಳ್ ಕುಱೆಯೊಂದನ್ ಇಱುಕಿ,
ಬಾ, ಕೃಷ್ಣ, ಯುದ್ಧಮನ್ ಪೊತ್ತಿಸಿದ ಮಾಯಾವಿ, ಫಲಮನ್ ಉಣ್, ಬಾರ,
ನೀನ್ ಪಿರಿಯ ಬಿರ್ದಿನನ್, ಎನುತೆ ಬೀಡಿಂಗುಯ್ದು ಹಿಂಸಿಸುತ್ತಿರ್ಪನ್.
ಸುತ್ತಲುಂ ಬೀರರೆಂದಟ್ಟಿತಂದುವು ಪಶುಗಳ್ ಇಱಿದು ಕೆಡೆದಿರ್ಕುಂ.
ನೋಡು, ಆ ನೋಟಮನ್. ಬೆದಱದಿರು. ತೋಱುವೆನ್ ಪೆರ್ಚಿದಾ ಪುರ್ಚನ್–
ಓಹೋ, ಅಶ್ವತ್ಥಾಮ, ಸೆಱೆಗಳನ್ ಪೀಡಿಸುವುದಂತಿರ್ಕೆ, ಬಾರ!
ಬಾರ, ಬೀರರ ಬೀರ, ದೈವಮನ್ ಲೆಕ್ಕಿಸದ ರುದ್ರಾವತಾರ!
ಕೃಷ್ಣನ್ : ಏನ್ ಮಾಟ್ಟೆ, ಓ ರುದ್ರ, ಕರೆಯದಿರ್, ಕರೆಯದಿರ್.
ರುದ್ರನ್ : ಏನಯ್ಯ, ಪೇಡಿತನಂ, ಅಂಜದಿರ್.
ಕೃಷ್ಣನ್ : ನಿನ್ನಾಣೆ, ಬೇಡ, ಬೇಡೊಳಗಿರ್ಕೆ.
ರುದ್ರನ್ : ಏನ್ ಭಯಂ? ಮರ್ತ್ಯನ್ ಅವನ್ ಈಗಳುಂ.
ಕೃಷ್ಣನ್ : ಮರ್ತ್ಯನೇ–ಆದೊಡೆನಗರಿಯ ಪಗೆ.
ರುದ್ರನ್ : ನಗೆ ಇನಿದು–ಪಗೆಗಳನ್ ನಗುವ ನಗೆ.
ಕೃಷ್ಣನ್ : ಬೇಡ ಎನಗಾ ನಲಿವು. ಒಳಗಿರ್ಕೆ.
ರುದ್ರನ್ : ಅಱೆವು ಮರುಳಾದಂಗೆ ಬೆದಱ್ವೆಯಾ?
ಕೃಷ್ಣನ್ : ಅಱೆವು ತಿಳಿದೆಯ್ತರ್ಕೆ, ಬೆದಱೆನ್.
ರುದ್ರನ್ : ನೀನ್ ಇರ್ಪುದನ್ ಬಂದು ಕಾಣನ್.
ಕೃಷ್ಣನ್ : ಅದೆಂತಕ್ಕುಂ? ಅವನ ಕಣ್ ಕುರುಡೆ?
ರುದ್ರನ್ : ಕಟ್ಟಲಿಪೆನ್ ಆನ್ ಕಾಣ್ಬ ಕಣ್ಣನ್.
ಕೃಷ್ಣನ್ : ಬಗೆಯ ದೇವತೆ ಆವುದಾಗದೋ!
ರುದ್ರನ್ : ಅಲುಗದೆಯೆ ನೋಡುತಿರು, ಅರುಗಾಗಿ.
ಕೃಷ್ಣನ್ : ನಿನ್ನಾಜ್ಞೆ.–ಆನ್ ಇರುವೆ ದೂರದೊಳ್!
ರುದ್ರನ್ : ಓಹೊ, ಅಶ್ವತ್ಥಾಮ! ಮತ್ತೊರ್ಮೆ ಬರವೇಟ್ಪೆನ್!
ಇಂದಿದೇನ್ ಇನಿತೊಂದು ಮಿತ್ರನೊಳ್ ಅನಾದರಂ?
[ಅಶ್ವತ್ಥಾಮನ್ ಚಮ್ಮಟಿಗೆವಿಡಿದು]
ಅಶ್ವತ್ಥಾಮನ್ : ಎನ್ನ ದೇವತೆ, ಗೆಲವು! ಗೆಲವು ಗೆಲವೋ ರುದ್ರ!
ಸಯ್ಪು ನೀನ್ ಬಂದುದು, ಕೃಪಾಕರಾ! ಈ ಜಯಕೆ
ಸೇವಿಪೆನ್ ನಿನ್ನ ಕೊರಲೊಳ್ ಪೊನ್ನ ತಲೆಗಳನ್.
ರುದ್ರನ್ : ನಲ್ನುಡಿ. ಅದಂತಿರ್ಕೆ. ಊಡಿದೆಯ–ಪೇಟೆನಗೆ–
ಪಾಂಡವರ ದಟದ ಬಿಸುನೆತ್ತರಿನ್ ಖಡ್ಗಮನ್?
ಅಶ್ವತ್ಥಾಮನ್ : ಎನ್ನದಾ ಅಗ್ಗಳಿಕೆ, ಏಕಿಲ್ಲಮೆಂದಪೆನ್!
ರುದ್ರನ್ : ಬಗೆ ತಣಿಯ ಪೊಯ್ದೆಯೋ ಭೀಮಪಾರ್ಥರ್ಕಳನ್?
ಅಶ್ವತ್ಥಾಮನ್ : ಇನ್ನವರ್ ಕೆಣಕರ್ ಅಶ್ವತ್ಥಾಮನ್ ಎಂಬೊನನ್.
ರುದ್ರನ್ : ಇರ್ವರುಂ ಸತ್ತರ್!
ಅಶ್ವತ್ಥಾಮನ್ : ಸತ್ತರ್. ಇನ್ ಪುಟ್ಟರ್. ತಣಿ, ಕೌರವ!
ರುದ್ರನ್ : ನಲ್ಲದು. ಆ ಪಾಂಡವರ್ ಪ್ರಾಣಮೆಂದಿರ್ದನೇ
ಅವನ ಗತಿ ಏನಾಯ್ತು? ಕಯ್ ನುಣ್ಚಿಕೊಂಡನೋ?
ಅಶ್ವತ್ಥಾಮನ್ : ಏನಾದನ್ ಆ ಗುಳ್ಳೆನರಿ ಎಂದು ಕೇಳ್ದೆಯಾ?
ರುದ್ರನ್ : ಅಪ್ಪುದಾ ಕೃಷ್ಣನ್, ನಿಮಗೆಲ್ಲಮ್ ಇಱೆವ ಮುಳ್.
ಅಶ್ವತ್ಥಾಮನ್ : ಆಹ, ಒಳಗಿರ್ಪನ್! ಸವಿಯ ಸೆಱೆ, ಸವಿಯ ಸೆಱೆ ಎನಗೆ.
ಅವನನ್ ಈಗಳೆ ಕೊಲ್ಲೆನ್, ಎನ್ನ ದೊರೆ!

ರುದ್ರನ್ : ಏನ್ ಮಾಟ್ಪೆ?
ಮೊದಲ್ ಅವನಿನ್ ಏನಾಗವೇಟ್ಟುಮೋ? ಏನ್ ಫಲಮೊ?
ಅಶ್ವತ್ಥಾಮನ್ : ಎನ್ನ ಗೂಡಾರದಾ ಕಂಬಕ್ಕೆ ಬಿಗಿದು–
ರುದ್ರನ್ : ಬಿಗಿದು–
ಅಶ್ವತ್ಥಾಮನ್ : ಈ ಚಮ್ಮಟಿಗೆ ಸುಲಿದು, ಬೆನ್ ಪಸುರ್ಗಟ್ಟಿ–
ರುದ್ರನ್ : ಪಾಪ, ರಾಸಕ್ರೀಡೆಯಾಡುವೊನ್ ಪೆಣ್ಡಿರೊಳ್!
ಅಶ್ವತ್ಥಾಮನ್ : ಆಡಿಪೆನ್, ಆಡಿಪೆನ್. ನೀರ್ ಕೇಳೆ, ಮೊಯ್ಪೊಯ್ದು, ಪಾಡಿಪೆನ್,
ರುದ್ರನ್ : ಬೇಡ, ಹಿಂಸಿಸಬೇಡ, ಆ ಬಡವು ಗೋಪನನ್.
ಅಶ್ವತ್ಥಾಮನ್ : ಮತ್ತೇನೆ ಕೇಳ್, ರುದ್ರ, ಕೊಟ್ಟಪೆನ್, ಇದೊಂದಿಲ್ಲಂ!
ಇಂತೆ ಸಾಯಲ್ವೇಟ್ಟುಂ ಆ ತಂತ್ರಿ.
ರುದ್ರನ್ : ಆಯ್ತಾಯ್ತು :
ನಿನ್ನಿಚ್ಚೆಗೆನ್ನಿಚ್ಚೆಯೇನ್? ನಲಿ, ಪೊಯ್ದು ನಲಿ.
ನಿನ್ನ ಕಯ್ ತಡೆವರ್ ಆರ್ ಇರ್ಪರ್? ಪೋಗು, ನಲಿ.
ಅಶ್ವತ್ಥಾಮನ : ನಲಿವೆನ್, ಇದೊ, ಪೋಪೆನ್–ಒಂದನ್ ಎರೆವೆನ್, ರುದ್ರ,
ಇಂದಿನವೊಲ್ ಏಗಳುಂ ಕಯ್ವಿಡದೆ ಕಾಪಾಡು. [ಪೋಪನ್]
ರುದ್ರನ್ : ಏನ್ ಪಿರಿದು, ನೋಡಿದೆಯ, ದೈವಬಲಂ, ಎಲೆ ಕೃಷ್ಣ,
ಆರಿರ್ದರ್ ಈತನಿನ್ ಜ್ಞಾನಿಯುಂ ಶೂರನುಂ?
ಬಲ್ಲಯ್ ಆರಾನುಮನ್?
ಕೃಷ್ಣನ್ : ನಾನ್ ಕಾಣೆನ್ ಆರುಮನ್.
ಅವನ ಗತಿಯನ್ ಕಂಡು, ಎನ್ನ ಪಗೆಯಾದೊಡಂ,
ವಿಧಿವಶದೆ ಕಾಲ್ತೊಡರ್ದು ಬಿಟ್ದಂಗೆ ಮಱುಗುವೆನ್.
ಇಂದವನ್, ನಾಳೆ ನಾನ್. ಏನ್ ಪಾಡೊ ಆಳ ಬಾೞ್!
ಬೀಸುವ ಬಯಲ್ಗಾಳಿ, ಪರಿದಡಂಗುವ ನೆಟಿಲ್!
ರುದ್ರನ್ : ಇಂತಪ್ಪ ನೋಟಂಗಳನ್ ನೋಡಿ, ದೈವದೊಳ್
ಸೊರ್ಕುನುಡಿ ನುಡಿಯದಿರ್; ಕೊರ್ಬದಿರ್, ನಿನಗೊರ್ಮೆ
ಸಿರಿಯೆನಿತು, ಬಲಮೆನಿತು, ಕಯ್ಯೆನಿತು ನಡೆದೊಡಂ!
ಒಂದು ಪಗಲ್ ಎತ್ತುವುದು, ಒಂದು ಪಗಲ್ ಉರುಳಿಪುದು
ಮಾನುಷಮನ್ ಎಲ್ಲಮನ್. ಮಿತಿಯಱಿದು ನೆಗಟ್ವರ್ಗೆ
ದೇವರ್ಕಳ್ ಒಸೆದಪರ್–ಮುಳಿದಪರ್ ಮಿಕ್ಕರನ್. [ಪೋಪರ್]

೧

ಮೇಳಂ : ದ್ರೋಣಪುತ್ರ, ರುದ್ರಮಿತ್ರ,
ನಿನ್ನ ಪೆಸರ ಪಱೆ ಇದೇನ್?
ಕೃಷ್ಣನ್ ಆಡೆ, ಕೂಡೆ, ಪಡೆಯೆ
ಕೂಗುತಿರ್ಪ ಕೂಗಿದೇನ್?
ಇರುಳೊಳ್ ಎಟ್ದು, ಮೇಲೆ ಬಿಟ್ದು,
ಮೆಯ್ಮಱೆತರನ್ ಇಱಿದೆಯಾ?
ಪಶುವಿದೆನ್ನದೆ, ಪಸುಳೆಯೆನ್ನದೆ,
ಬಾಳ್ ಮಿನುಗಿಸಿ ತಱಿದೆಯಾ?
ಕೆಟ್ಟ ಬಾಯ್ಗಳ್ ಉಲಿವರ್ ಇಂತು,
ನಿನ್ನ ನಾಣ್ಗೆ ನಲಿವರೇ!
ತೆಂಕನಾಡ ಶೌರ್ಯಮಿದೆಂ

ದೆಮ್ಮ ಪೆಸರ್ ಸುಲಿವರೇ!
ದ್ರೋಣಪುತ್ರ, ರುದ್ರಮಿತ್ರ,
ನಿನಗೆ ಶುಭಮೆ ನಲಿವೆನ್ ಆನ್.
ಬೆದರುಗಣ್ಣ ಬೆಳುವನಂತೆ
ನಿನ್ನಟಿಲ್ಗಟಿಲ್ವೆನಾನ್.
ಪಿರಿಯನಾಗು, ಕಿಜೆಯವೆಲ್ಲ
ಕಜುಬಿ ಕೆಸಜಿನ್ ಇಡುಗುಮೇ!
ಮೇಲ್ಮೆಯವನೊಳ್ ಎಚ್ಚ ಕೋಲೊ
ತಪ್ಪದೆ ಗುಜೆ ನಡುಗುಮೇ!
ಏಟಿ ಗುರುವೆ, ಸೂರ್ಯನೊಡನೆ,
ನಮ್ಮ ಬಾಟಿ ಸೂರ್ಯನೇ,
ಕವಿದ ಪಟೆಯ ಪಿರಿಯ ಮರ್ಬ
ನುರಿದು ಚೆದಜೆಸಾರ್ಯನೇ?

೨

ಅರೆಮೇಳಂ ೧ : ಕೃಷ್ಣನೇನ್ ಪುಸಿವನೇ, ನಾನ್ ಪೇಟಿಲಾಜೆನ್!
ನಂಬದಿರಲಾಜೆನೇ, ನಂಬಲ್ಕಮಾಜೆನ್!
ಏನ್ ಭಯಂಕರಮಾಯ್ತೊ ಇರುಳೊಳಗೆ ಕಾಣೆನ್!
ಎನ್ನೊಡೆಯನನ್ ಮುಳಿದು ರುದ್ರನೇ ಪೊಯ್ದನೋ
ಗೆಲ್ಲಕ್ಕೆ ಜಾತ್ರೆಯನ್ ಬಂದುದಿಲ್ಲೆಂದು?
ತನಗೆ ಮುಡಿಪನ್ ಕಟ್ಟಿ ತಂದುದಿಲ್ಲೆಂದು?
ಮೊದಲ ಬೇಂಟೆಯೆ ತನಗೆ ಸಂದುದಿಲ್ಲೆಂದು
ಕಣ್ ಕಟ್ಟಿ ಶಬರಶಂಕರ್ ಎತ್ತಲ್ ಉಯ್ದನೋ?
ಮೊನೆಯೊಳ್ ನೆರಂ ಬಂದು, ಧಿಕ್ಕರಿಸೆ, ಬಯ್ದನೋ
ಅಜೆವು ಮರುಳಾಗೆಂದು ಬೀರನ್, ಕುಮಾರನ್?
ಏನ್ ಬುದ್ಧಿಮೋಸಮೋ, ಇರುಳೊಳಗೆ ಕಾಣೆನ್!
ಶಿವನ್ ಉಗ್ರನಾದುದೇನ್, ಕಾಣೆನ್!
ಅರೆಮೇಳಂ ೨ : ಇಲ್ಲದಿರೆ, ಎಂತಕ್ಕುಮ್ ಈ ಪೊಲ್ಲಗೆಯ್ಮೆ?
ಎಲ್ಲರುಂ ಕೂಗುವೀ ನಾಣ್ಗೆಟ್ಟ ಗೆಯ್ಮೆ?
ಎನ್ನೊಡೆಯ, ತಿಳಿದು ತಿಳಿದುಂ ತಪ್ಪಿ ಪೋಗಯ್!
ಎನ್ನೊಡೆಯ, ತಜೆಸಂದು ತುಜುಗಳನ್ ಕೊಲ್ವೆಯಾ?
ಮೂಗುಸಿರ್ಗಳನ್ ತಜುಬಿ, ಮಂದೆಗಳನ್ ಇಡಿದು,
ಅರೆಬಿರಿದ ಪೊಸ ಎಸಟ್ ಮಕ್ಕಳನ್ ಬಡಿದು,
ಬಾಯ್ಬಿಟ್ಟು ಬೇಡುವಾ ಪೆಣ್ಗಳನ್ ಕಡಿದು,
ಕಲಿಗಳೊಳೆ ಕಲಿ ಎಂದು ನೀನ್ ಇಂತು ನಿಲ್ವೆಯಾ?
ಮೇಣ್ ಒರ್ಮೆ, ದೇವತೆಗಳೇ ಕಟಿಪೆ, ಗೆಲ್ವೆಯಾ
ಕಳ್ಳನ್ ಉಣಿಸುವ ಮೋಹನದ ಕಣ್ಣ ಪೆಣ್ಣನ್?
ಇಲ್ಲದಿರೆ, ನೀನ್ ಇರುಳ್ ನಿಜೆದಪ್ಪಿ ಪೋಗಯ್ :
ಘೋರಕರ್ಮಮನ್ ಎಸಗೆ ಪೋಗಯ್.

ಏಟಿ, ಏಟಿ, ಓ ಅಶ್ವತ್ಥಾಮಾ,
ಮುನ್ನೀರೆಲರಾ ನಾಡಿನ ಪ್ರೇಮಾ,
ಬೀದಿವರಿವುದೇ ಬೀಡಿಯೊಳ್ ಎತ್ತಂ,
ತನ್ನಿಚ್ಚೆಯೊಳೇ ತಾನ್ ಬಗೆದತ್ತಂ,
ಕೃಷ್ಣನ ನುಡಿ; ಅದು ಪುಸಿಯೆನಿಸೇಟಿಾ.
ಎಮಗೊಂದಭಯದ ನುಡಿಯನ್ ಪೇಟಿಾ.
ರುದ್ರಭಕ್ತನೇ, ಆರ್ಯಪೂಜ್ಯನೇ,
ಮೊಗದೋಜಿದಿದೇನ್, ಬಾರಾ, ಬಾರಾ.
ಪಟಿಯ ಬೆಂಕೆಯೊಳ್ ಬೆಂದೆನ್, ನೊಂದೆನ್,
ಅಟಿಲ್ಗೆ ತಣ್ಪನ್ ತಾರಾ, ತಾರಾ.
ತಪ್ಪಿರೆ, ಶಿವನಾ ಕ್ಷಮೆಯನ್ ಸೇರಾ,
ಒಪ್ಪಿರೆ, ಶಿವನೇ ಪೊರೆವನ್, ಪಾರಾ.

[ಬೀಡಿನ್ ಭಾರ್ಗವಿ]

ಭಾರ್ಗವಿ : ನೀಳ್ದೋಳ್ ವಿಂಧ್ಯದ ತೆಂಕಣ ನಾಡರ್,
ಅಶ್ವತ್ಥಾಮನ ಕಳೆಯರ್, ಬೇಡರ್,
ಕ್ರೂರಮ್ ಎಮ್ಮ ವಿಧಿ ಈ ಕುರುಧರೆಯೊಳ್!
ಆತ್ಮಂ ಪುದಿದಿರೆ ತಮದೊಳ್, ಜೋಲ್ದನ್
ಎಂತಪ್ಪೆಡರ್ಗಮ್ ಒರ್ವನೆ ಸಾಲ್ದನ್,
ಕಂದನ್, ಪೊಯ್ವಾಕ್ರೋಶದ ತೆರೆಯೊಳ್.

ಮೇಳನಾಯಕನ್ : ಏನದು ಕೊಜೆದುದು ತೊಟ್ಟನೆ ಇರುಳೊಳ್
ನಿನ್ನೆಯ ಭಾಗ್ಯದ ಬಳವಿಯ ತಿರುಳೊಳ್?
ಭಾರ್ಗವಕುಲದಾ ರತ್ನಮೆ, ನಲ್ಲಯ್,
ದ್ರೋಣನ ತಾಯೇ, ಅಜೆಯದಳಲ್ಲಯ್,
ಅಶ್ವತ್ಥಾಮನ ಬಗೆಯನ್ ಬಲ್ಲಯ್.
ಅಜೆಪು ಎಮಗದನ್. ದಿಟಮನ್ ಕೇಳ್ವೆನ್.

ಭಾರ್ಗವಿ : ಆಡಬಾರದುದನ್ ಎಂತಾಡುವೆನೋ!
ಸುರಿವೆನ್ ಕಿವಿಯೊಳಗುರಿಯನ್ ಅದೆಂತೋ!
ಇರುಳ್ ಉನ್ಮತ್ತನ್, ಅಶ್ವತ್ಥಾಮನ್,
ಕೀರ್ತಿಯನ್ ಒರ್ಮೆಯೆ ಕೊರಲನ್ ಮುಜೆದನ್.
ನೆತ್ತರ್! ನೆತ್ತರ್! ಕಟುಕರ ಕಡಿತಂ!
ಅವನಯೆ ಕಯ್ಯೊಳ್ ಪಶುಗಳ ಯಜ್ಞಂ!

ಮೇಳಂ : ಏನ್ ಪೇಟ್ಕೆ ಪೇಟ್ದೆ ನೀನ್, ಮುತ್ತಬ್ಬೆ, ಘೋರಂ!
ಕಾಟ್ಕೆರ್ಚಿನನ್ನನದು, ಮುಚ್ಚದುದು, ಕ್ರೂರಂ!
ದಿಟಮಾಯ್ತು, ದಿಟಮಾಯ್ತು, ಪಾಂಡವರ ಕೂಗು!
ಅಕ್ಕಟಾ, ಅಕ್ಕಟಾ, ಇನ್ನಾಗುವಾಗು!
ಸೇನೆಯಿದಿರೊಳ್ ನಿಲಿಸಿ ಕೊಲ್ಲರೇ ಇಂದು,
ತೇಜಮನ್ ಕಿಡಿಸಿ, ಭೀಮಾರ್ಜುನರ್ ಬಂದು.
ನಮ್ಮ ಬೀಡೊಳ್ ನುಸುಳ್ದು ನಿದ್ದೆ ಬಿಗಿದಂದು
ತುಜುಗಳನ್, ಕಾವಲರನ್ ಇಜೆದೊನ್ ಇವನೆಂದು!

ಭಾರ್ಗವಿ : ಅತ್ತಣಿನೋ, ಅತ್ತಣಿನೋ,
ಮಂದೆಯೊಡನೆ ಬಂದುದವನ್!–

ಕರುಳಿಜೆದುಂ, ಗೋಣ್ ಮುಜಿದುಂ,
ನೆತ್ತರ ತೊಜೆ ಮಿಂದನವನ್;
ಜರ್ಗಿಸಿ, ಗೂಳಿಯನ್ ಒಂದನ್
ನಾಲಗೆಯನ್ ಸೀಳ್ದನ್ ಅವನ್;
ಕಂಬಕೆ ಬಿಗಿದೊದೆದೊದೆದು,
ಕೀಱುವ ಕುಜೆ ಪೊಯ್ದನ್ ಅವನ್;
ಪೊಯ್ಯಡೆಯಡೆ, ಬಯ್‌ಬಯ್ದು ನಲಿದನ್ ಅವನ್–
ಮೆಯ್ಯ ಮರುಳ್, ತಾನಲ್ಲನ್, ನಲಿದನ್ ಅವನ.
ಮೇಳಂ : ಇಲ್ಲಿರದೆ, ಕಳ್ಳನವೊಲ್ ಆನ್ ಓಡಿಪೋಪೆನ್!
ತಳ್ವದೆ ಮೊಗಂಮುಚ್ಚಿ ತಲೆಮಱಿಸಿ ಪೋಪೆನ್!
ಏಕಲವ್ಯನ್ ಅದೇಕೆ ಈ ಕಳಕೆ ಬಂದನ್!
ಎಮ್ಮ ನಾಯಕನ್ ಎನ್ನನ್ ಏಕಿಲ್ಲಿ ತಂದನ್!
ಕೃಷ್ಣಭೀಮರ್ ಪಿಡಿದು ಕೊಲ್ಲದಿರರ್ ಎನ್ನನ್.
ಕಲ್ಲಿಟ್ಟು ದಟಿಮೆಲ್ಲ ಕೊಲ್ಲದಿರದೆನ್ನನ್.
ಓ ಗುರುವೆ, ಪೊರೆವರ್ ಆರ್ ಎನ್ನನ್, ಅಹ, ನಿನ್ನನ್!
ಉಗ್ರವಿಧಿ ಎಟೆದಾಡುತಿರ್ಪುದೇ ನಿನ್ನನ್

ಭಾರ್ಗವಿ : ಇಲ್ಲೀಗಳ್, ಇಲ್ಲೀಗಳ್,
ಸಿಡಿಲ್ ಬಡಿದು ಪೋಯ್ತು;
ಕಾರ್ಮುಟಿಯ ಬಿಱುಗಾಳಿ
ಮೊದಲುಱುಬು ಸಯ್ತು.
ಅಜಿವು ಮಗುಳ್ದೆಟ್ಟಿತ್ತುಂ,
ಪೊಸ ದುಃಖಮಾಯ್ತು.
ಆ ನೋವು ಕೂರಿತ್ತು, ಕಯ್ಯಾರ ನಾಮೆ
ಕೊಂಡೆಸಗಿ ಕಣ್ಣಾರ ನೋಡುವವೊಲೆಯ್ಮೆ.
ಮೇಳನಾಯಕನ್ : ಅವನುಬ್ಬಸಂ ಪಱೆಯೆ, ಎಲ್ಲಮೊಳ್ಳಿತೆ ಅಕ್ಕುಂ.
ಎಳ್ಳನಿತೆ ಕಳೆದಟಿಲ್.
ಭಾರ್ಗವಿ : ನೀನ್ ಆವುದಾಯ್ದಪಯ್–
ಆಯಲಿರೆ–ನೀನ್ ನಲಿದು, ಕೆಳೆಯರನ್ ಕೊರಗಿಪೆಯೊ?
ಕೆಳೆಯರುಂ ಕೊರಗುತಿರೆ, ನೀನುಮ್ ಒಡನಟಿಲ್ದಪೆಯೊ!
ಮೇಳನಾಯಕನ್ : ಇರ್ವರುಂ ಕೊರಗುವುದೆ, ಅಮ್ಮಯ್ಯ, ಪೆರ್ಕೊರಗು.
ಭಾರ್ಗವಿ : ಇಂತೆಮಗೆ ಪೆರ್ಕೊರಗು–ಆ ಪುರ್ಚು ಸಜೆದೊಡಂ.
ಮೇಳನಾಯಕನ್ : ಏನಿದಿಂತೆಂಬೆಯೇ! ತಿಳಿಯದೆನಗೀ ಮಾತು.
ಭಾರ್ಗವಿ : ಆತನ್ ಆ ಕುತ್ತದೊಳ್ ಭ್ರಾಂತಿಗಳ ಬಡಿತದೊಳೆ
ಆನಂದಮನ್ ಸವಿದನ್–ಅಜೆದೆಮಗೆ ದುಃಖಮೇ
ಆದೊಡಂ. ಈಗಳೋ, ಬುದ್ಧಿ ಬರೆ, ಚೇತರಿಸಿ
ಅವನ್ ಎಟ್ಟು, ಮೊದಲಿಂದೆಯುಂ ಪಿರಿಯ ದುಃಖದೊಳ
ಗಟ್ಟಿದನ್. ನಾಮೊ, ಮೊದಲಂತೆಯೇ ದುಃಖಿಗಳ್,
ಕುಂದಿಲ್ಲ. ಒಂದು ಪೋಯ್ತೆರಡಾಯ್ತು ದುಃಖಂ!
ಮೇಳನಾಯಕನ್ : ಒಪ್ಪಿದೆನ್. ದೇವತೆ ಅದಾವುದೋ ಕಾಡುಗುಂ.

ಇಲ್ಲದೊಡೆ, ಗುಣಮಾಗಿಯುಂ ರೋಗಿಯಂತೆಯೇ
ನರಲ್ವನೇ?
ಭಾರ್ಗವಿ : ನರಲ್ವನೆಂಬುದು ನಿಜಂ, ನಂಬು.
ಮೇಳನಾಯಕನ್ : ಎಂತು ಮೊದಲ್ ಎಱಗಿತೋ ಈ ಪಾೞುಪದ್ರವಂ?
ಅಱಿಪುವೆಯ ನಡೆದುದನ್? ನಿನ್ನೞಿಲ್ ನಮ್ಮದುಂ.
ಭಾರ್ಗವಿ : ಪಾಲ್ಗಾಱಿರ್ ಅಣ್ಣಂದಿರ್! ಎಲ್ಲಮನ್ ಪೇೞ್ವೆನ್.–
ನಲ್‌ನಿಶೆಯೊಳ್, ಆಱುತಿರೆ ಸಂಜೆಯುರಿ, ಇರ್ಬಾಯ ಖಡ್ಗಮನ್ ತುಡುಕಿ
ಗುಱಿಯಿಲ್ಲದೆತ್ತಲೋ ತೆರಳ್ವನನ್ ನಾನ್ ತಡೆದು, ಏನಿದೀ ಪೋೞ್ತು
ನಡೆವುದಶ್ವತ್ಥಾಮ? ಬೞಿಯಟ್ಟದೇ, ಕಾಳೆ ಕೂಗದೇ, ಬೞಲ್ದು
ಪಡೆಯೆಲ್ಲಮ್ ಒಱಗಿರ್ಕುಮೇ ಎಂದೆನ್. ಪೊಯ್ವೆತ್ತ ಪಾವಂತೆ ಮೊರೆದು,
ಪೆಣ್ ಬಲ್ಲ ಮಾತಿನೊಳ್, ಬಾಯ್‌ಮುಚ್ಚಿರಲ್ ಚೆಲ್ವು ಪೆಣ್ಣೆಂದು ಗದಱಿ
ನೂಂಕಿ, ಪೊಱಮಟ್ಟನ್. ನಾನ್ ಸುಮ್ಮನಾದೆನ್. ಏನಾಯ್ತೊ ಪೊಱಗೆ
ನಾನ್ ಅಱಿಯೆನ್. ಒಳಗಟ್ಟುತುಂ ಬಂದನ್ ಆಕಳನ್, ಗೂಳಿಯನ್, ಕುಱಿಯನ್,
ತುಱುಗಾವ ನಾಯ್ಗಳನ್, ಕಟ್ಟಿಕೊಂಡೆಲ್ಲಮನ್. ಕೊತ್ತಿದನ್ ಅದೊಂದನ್,
ಕೊರಲ್ ಮುಱಿದನ್ ಒಂದನ್, ತಲೆವೊಯ್ದನ್ ಒಂದನ್, ತುಯ್ದೊಗೆದನ್ ಒಂದನ್.
ಚಿತ್ರಹಿಂಸೆಯೆ ಆಯ್ತು ಒರ್‌ಕುಱಿಗೆ! ಆಳೆಂದು ಪೊಯ್ದುವೋ ಪಶುಗಳ್!
ಕಡೆಗೆ, ಪೊಱಗಡೆ ಓಡಿ, ಬಱಿಯ ಬಯಲೊಳಗದಾರೊಡನೆಯೋ ನಗುತೆ,
ಭೀಮಂಗೆ, ಪಾರ್ಥಂಗೆ, ಕೃಷ್ಣಂಗೆ ತೀರಿಸಿದ ಮುಯ್ಗಳನ್ ಕೀಱಿ,
ಅಣಕಿಸುತೆ, ಪುರ್ಚುನಗೆ ನಗುತಿರ್ದು, ಮತ್ತೆ ತಾನ್ ಒಳಗಣ್ಗೆ ಬಂದನ್.
ಆಗಳ್ ಅಹ! ಮೆಲ್ಲಮೆಲ್ಲನೆ, ಕಿಱಿದು ಕಿಱಿದಾಗಿ ಮಗುಳ್ದತ್ತು ಜ್ಞಾನಂ!
ಕರ್ಣ ಸುೞಿದುದೆತ್ತಲುಂ; ಘೋರಕರ್ಮಂ ಕೊಳುತೆ, ಕೂಗಿದನ್; ತಲೆಯನ್
ಚಚ್ಚಿದನ್; ಧೊಪ್ಪೆನುತೆ ಕೆಡೆದನ್ ಆ ಕೆಡೆದ ಪೆಣಬಣಬೆಯೊಳ್; ತಱಿದನ್
ಬಲ್ವಿಡಿಯುಗುರ್ಗಳಿನ್ ನವಿರ್ಗಳನ್. ಒಂದು ಮಾತಾಡದೆಯೆ ಕುಳ್ತನ್
ಬಲ್‌ಪೊೞ್ತು. ಬೞಿಕೆನ್ನನ್–ಓ ಭಯಮೆ!–ಬೆದಱಿಸುತೆ, ಪೇೞು, ಪೇೞಲಗೆ
ಏನಾಯ್ತಿದೇನ್ ಎನ್ನ ಪಾಡು, ಪೇೞ್ ಎಲ್ಲಮನ್. ಪುಸಿಯದಿರ್, ನೋಡು,
ಎಂದೊದಱಿದನ್. ಬೆದಱಿ, ಕೆಳೆಯರಿರ, ಕಂಡುದನ್ ಕಂಡಂತೆ ಪೇೞ್ದೆನ್.
ಕೇಳ್ದು ಕೇಳ್ದೆರ್ದೆ ಬಿರಿಯೆ, ಪಿಂತೇಗಳುಂ ಕೇಳದೊಂದಟ್ಟೆಯಟ್ಟಿನ್!
ಪಿಂತೆನಗೆ ಪೇೞ್ವನ್, ಆ ಅಟ್ಟುವದೆಲ್ಲಂ ಪೇಡಿಗಳ್ಗೆ, ಪೆಣ್ಣಾಳ್ಗೆ!
ತಾನೆಂದುಮ್ ಅಂತೞಿನ್; ಸಿಂಹದವೊಲ್ ಆೞಿದೊಳೆ ನರಲ್ವೊಡೆ ನರಲ್ವನ್.
ಇಂತೆನ್ಬನ್ ಈ ಘೋರದೊಳ್ ಸಿಲ್ಕಿ, ಉಣ್ಣದೀಂಟದೆ, ತಾನೆ ಇಱಿದ
ತುಱುಗಳೆಡೆ ನುಡಿಯದೆಯೆ ಕುಳ್ಳಿರ್ಪನ್–ಏನನೋ ಬಗೆಯುತ್ತುಮಿರ್ಪನ್.
ನಲ್ಲದನ್ ಬಗೆಯನೇ! ಅದೊ ಕೇಳಿಂ ಆ ನರಲ್ವ ನರಲ್ಗಳನ್! ಬನ್ನಿಂ,
ಆದುದನ್ ನೀಮ್ ಮಾಡಿಂ, ಆತನನ್ನರ್ ಕೇಳ್ವರ್, ಸಂತೈಸೆ ಕೆಳೆಯರ್.
ಮೇಳನಾಯಕನ್ : ಪರಶುರಾಮನ ತಂಗೆ, ಭಾರ್ಗವೀ, ಪೊಲ್ಲದೇ
ಈ ಸುದ್ದಿ–ಬಸವೞಿದನೇ ಮರುಳ್ದು ನಮ್ಮ ಕಲಿ!

[ಒಳಗೆ]

ಅಶ್ವತ್ಥಾಮನ್ : ಅಯ್ಯೊ ಪಾಪೀ–ಅಯ್ಯೊ ಪಾಪೀ!
ಭಾರ್ಗವಿ : ಓ ಇನ್ನುಮೇನ್ ಪೊಲ್ಲದಕ್ಕುಮೋ ಅಱಿಯೆನೇ!
ಕೇಳ್ದಿರ್ ಅಶ್ವತ್ಥಾಮನನ್? ಕೇಳ್ದಿರ್ ಆ ಕೂಗನ್!
ಅಶ್ವತ್ಥಾಮನ್ : ಅಯ್ಯೊ ಪಾಪೀ! ಅಯ್ಯೊ ಪಾಪೀ!
ಮೇಳನಾಯಕನ್ : ಪೊಸ ಪುರ್ಚೊ? ಮೊದಲ ಪುರ್ಚನ್ ಕಂಡು ಸಂಕಟಮೊ?

ಅಶ್ವತ್ಥಾಮನ್ : ಮಗೂ, ಮಗೂ!
ಭಾರ್ಗವಿ : ಕೆಟ್ಟೆನ್ ಆನ್! ಏಕೆ ಕರೆವನ್ ರುದ್ರಶಕ್ತಿಯನ್?
ಏನೆಣಿಕೆಯೋ ಕಾಣೆನ್! ಏನ್ ಬಂದುದೆಮಗಿಂದು!
ಅಶ್ವತ್ಥಾಮನ್ : ಏಕಲವ್ಯಾ, ಏಕಲವ್ಯಾ–
ಅವನ ಬೇಂಟೆಯೋ ಮುಗಿಯದೆಂದುಂ!
ಇಲ್ಲಿ ನಾನೋ ಸಾಯುತಿರ್ಪೆನ್!
ಮೇಳನಾಯಕನ್ : ಪುರ್ಚಲ್ತು. ಪೋ ತೆಱೆಯ, ಬಾಗಿಲನ್ ತೆಱೆಯ.
ಆತನ್ ಎಮ್ಮನ್ ಕಂಡು ಶಾಂತನಾದಪ್ಪನ್.
ಭಾರ್ಗವಿ : ಇದೊ ತೆಱೆದೆನ್. ನೋಡಿಮ್ ಆತನ ಕೆಲಸಮನ್, ಪಾಡನ್.
[ಪಶುಗಳ ನಡುವೆ ಅಶ್ವತ್ಥಾಮನ್]
ಅಶ್ವತ್ಥಾಮನ್ : ಓವೊ ಕೆಳೆಯರಾ, ನಲ್ಲ ಬೇಡರಾ,
ಎನಗೆ ಪೇಸದೆಯೆ ಇನ್ನುಮ್ ಇರ್ಪಿರಾ?
ನೋಡಿಮ್, ಆವ ತೆರೆ ತಲೆಯಮೇಲುರುಳ್ದು
ಬಳಸಿಕೊಂಡುದೆನ್ನನ್!
ಮೇಳನಾಯಕನ್ : ನೀನ್ ಪೇೞ್ದುದಾವುದುಂ ಪೆರ್ಚಲ್ತು, ತಾಯೆ.
ಪ್ರಜ್ಞೆಯಿರ್ದರ್ ಮಾಟ್ಪ ಕೆಲಸಮೇ ಈ ಕೆಲಸಂ?
ಅಶ್ವತ್ಥಾಮನ್ : ಕಾಡೊಳ್ ಎನಗೆ ಒಡನಾಡಿಯಾದವರ್,
ಬಿಲ್ಲನ್ ಒಡನೆಟೆದು ಬೇಂಟೆಯಾಡಿದರ್,
ನೀಮೆ, ನೀಮೆ ಗತಿ, ಕೊಲ್ಲಿಮ್ ಎನ್ನುಮನ್,
ಕೊಲ್ಲಿಮ್ ಎನ್ನನ್ ಎಲ್ಲರ್.
ಮೇಳನಾಯಕನ್ : ಕೆಟ್ಟ ಮಾತಾಡದಿರು. ಮರ್ದುಲ್ತು ಪೊಲೆಗೆ ಪೊಲೆ,
ಅಶ್ವತ್ಥಾಮನ್ : ಕಾಣ, ಕಾಣ, ಕೆಚ್ಚೆರ್ದೆಯ ಶೂರನನ್!
ಪಗೆಗೆ ತೆಗೆಯದಾ ರಣದ ಧೀರನನ್!
ತುಱುಗಳ್ ಅಱೆಯದುವನ್ ಒರ್ವನ್ ಇಱೆದವನ್!
ಆಹ ಧೀರನ್! ಆಹ ಶೂರನ್!
ಪೆಸರೊ, ಹೋ, ರುದ್ರಾವತಾರನ್!
ಭಾರ್ಗವಿ : ಇಂತಾಡದಿರು, ಬೇಡ; ಬೇಡಿಕೊಳ್ವೆನ್, ಕಂದ.
ಅಶ್ವತ್ಥಾಮನ್ : ಪೋಗು, ಪೋಗೆಲಗೆ, ತೊಲಗು, ತೊಲಗು.
ಓ ಪಾಪೀ! ಓ ಪಾಪೀ!
ಭಾರ್ಗವಿ : ತಾಳ್ದುಕೊಳ್, ತಡೆದುಕೊಳ್.
ಅಶ್ವತ್ಥಾಮನ್ : ಅಯ್ಯೊ ಪಾಪಿಯೇ, ಪರಮನೀಚರನ್
ನುಣ್ಚಿಪೋಗವಿಟ್ಟೆಕಟ! ಪಶುಗಳನ್
ಪೊಯ್ದು ನೆತ್ತರನ್ ಕೋಡಿಕೆಡಪಿದಯ್!
ಮೇಳನಾಯಕನ್ : ಆದುದನ್ ನೆನೆನೆನೆದು ಪಂಬಲಿಸಲ್ ಅಪ್ಪುದೇನ್?
ಆದುದಾಗಿಯೆ ಪೋಯ್ತು. ಅದನ್ ಅೞಿಸಬರ್ಕುಮೇ?
ಅಶ್ವತ್ಥಾಮನ್ : ಎಲವೊ ಕೃಷ್ಣಾ! ಮರ್ಮಘಾತಕಾ!
[ಪೊಱಗೆ ನೆಗೆದು ಬಂದು]
ಆವುದಾಗುವೊಡಮಲ್ಲಿ ನಿನ್ನ ಕಣ್.
ಆವುದೆಸಗುವೊಡಮಲ್ಲಿ ನಿನ್ನ ಕಯ್.
ಶತ್ರುಪಕ್ಷದೊಳ್ ಬಿಡದ ಶತ್ರುವೇ,
ನಿಲಿಸಲಾಱದೆಯೆ ನಗುತುಮಿರ್ಪೆಯೇ!

ಮೇಳನಾಯಕನ್ : ದೇವರ್ ಇತ್ತಂತೆಯೇ ನಾಮ್ ನಗುವುದಟ್ಟುದು.
ಅಶ್ವತ್ಥಾಮನ್ : ಮುಜಿದೆನಾದೊಡಂ–ಇದಿರ್ಗೆ ಬಾರನೇ!
ಮೇಳನಾಯಕನ್ : ಸೊರ್ಕುನುಡಿ ನುಡಿಯದಿರ್. ಕಾಣದೇ ಈ ಪಾಡು?
ಅಶ್ವತ್ಥಾಮನ್ : ಓ ರುದ್ರ! ಗುರುದೇವ! ಎನ್ನ ಗುರುವಿನ ಗುರುವೆ!
ಕೊಲೆ ಕುಡಾ ಮಾಯಾವಿಯೊರ್ವನನ್, ಕ್ಷುದ್ರನನ್!
ಕೀಟ್ ಭೀಮನೊರ್ವನನ್. ಬಟೆಕೆನ್ನುಮನ್ ಕೊಳ್.
ಭಾರ್ಗವಿ : ಎನ್ನುಮನ್ ಕೊಳ್ಳೆಂದು ಬೇಡಿಕೊಳ್. ನೀನ್ ಸಾಯೆ,
ನಾನ್ ಆರ್ಗೆ ಬಾಟ್ವೆನ್?
ಅಶ್ವತ್ಥಾಮನ್ : ಓ ಮರ್ಬೆ, ಎನಗೆ ಬೆಳಕೇ,
ಕಟ್ತಿಲೆಯೆ, ಬಿಸಿಲ ಪೊಳಪೇ,
ಕೂಡಿಕೊಳ್, ಕೂಡಿಕೊಳ್, ನಿನಗೊಕ್ಕಲ್ ಅಪ್ಪೆನ್.
ಪ್ರಭುಗೆ ಮೊನೆಗಾಗದೊನ್ ಪಗೆ ತೀರ್ಚಲ್ ಎಟ್ಟಿದೆನ್,
ವಿಧಿ ತೊಡರೆ, ತುಱುಗಳೊಳ್ ಬಿಟ್ಟಿದೆನ್;
ದ್ರೋಹನ್, ದುರ್ದೈವನ್, ಪಟೆಯಳಿಜೊಳ್ ಅಟ್ಟಿದೆನ್.
ಬಾಟಿಲ್ ಇನ್ನರ್ಹನಲ್ಲನ್.
ಒಂದುಮನ್ ಪಾರ್ವನಲ್ಲನ್.
ಬಾನವರ ಮಾನವರ ಕಣ್ಣೊಳ್ ಇನ್ನೊಪ್ಪೆನ್.
ಸಾಲ್ಗುಮ್ ಈ ರುದ್ರನಣಕಂ,
ಕೊಲ್ಗುಮ್ ಈ ಶೂಲಿಯಣಕಂ,
ತಾನೇ ಮಹಾಬಲನ್ ಕಾಡುವೊಡೆ ಕಾಟಂ,
ಎತ್ತಲ್ ಓಡುವೆನೊ ಓಟಂ,
ಶರಣಾರೊ, ಶಾಂತಿಕೂಟಂ
ಎತ್ತಲೋ, ಎನಗೆ ಲೋಕಂ
ಮರುಳೆಂದು ಪಾಡುವುದೆ ಪಾಟಂ,
ಪೆಸರೊ ಕೆಸಱಿಂಟಿ ಶೋಕಂ,
ಪಶುಗಳೊಳ್ ಪಶುವಾಗಿ ಪಶುಪತಿಗೆ ನೋಟಂ–
ಕಣ್ಗಿಂಪುನೋಟಂ!
ಭಾರ್ಗವಿ : ಎಂದಿಂಗಮ್ ಆಡದುವನ್ ಆಡುವನೆ ಈತನ್,
ಪೆರ್ಮೆಯಾಳ್, ಇಂತಪ್ಪನ್, ಇಂತಪ್ಪ ಮಾತನ್!
ಅಶ್ವತ್ಥಾಮನ್ : ಓವೊ, ಕನ್ನಡದ ನಾಡೇ,
ಮುನ್ನೀರ್ಮೊಟಂಗು ಕರೆನಾಡೇ,
ಮಲೆನಾಡೆ, ಪೊನಲ್ನಾಡೆ, ಬಯಲ ಪೊನ್ನಾಡೇ,
ಪಲಕಾಲಮ್ ಆನ್ ಅಗಲ್ದಿರ್ದೆನ್.
ಅಲ್ಲಿ ಕಣ್ಮುಚ್ಚಲೆಂದಿರ್ದೆನ್.
ಇಲ್ಲಮೆನಗಾ ಪುಣ್ಯಂ, ಓ ಚೆಲ್ವ ನಾಡೇ,
ಎಲೆ ಕುರುಕ್ಷೇತ್ರಮೇ,
ಅಮೃತತೀರ್ಥಂಗಳೇ,
ಆರ್ಯನಗರಂಗಳೇ, ಸ್ವರ್ಗಂಗಳೇ,
ದಿವ್ಯಜನಮೇ, ಮನಮೆ,
ತಂದೆಯೊಡನೆಳಮೆಯೊಳೆ
ನಿಮ್ಮೊಳ್ ಒಂದಾದೆನ್.

ಆಳ್ದಂಗೆ ನಚ್ಚಿನಾಳಾದೆನ್.
ಸೊರ್ಕುನುಡಿ ನುಡಿವೆನ್–
ಇಂತಪ್ಪನ್ ಇಲ್ಲಮೆಂದಾದೆನ್.
ಈಗಳೋ, ಇಂತಪ್ಪನ್ ಇಲ್ಲಮೆಂದೇ ಆದೆನ್!
ಪುಡಿಯೊಳಗೆ ಪುಡಿಯ ಪುಡಿಯಾದೆನ್–
ನಾಣ ನುಡಿಯಾದೆನ್.
ಮೇಳನಾಯಕನ್ : ಇಂತಪ್ಪ ದುಃಖಮನ್ ತಡೆಯಲ್ಕಮಾಱೆನ್;
ನುಡಿಯೆಂದು ನುಡಿಯಲ್ಕಮಾಱೆನ್.

ಅಶ್ವತ್ಥಾಮನ್ :
ಅಹ! ಎನ್ನ ಪೌರುಷಮೆ! ಎನ್ನೊಂದು ಭಾಗ್ಯಮೇ! ಪೂಜ್ಯರೊಳ್ ಪೂಜ್ಯನ್
ಎಮ್ಮಯ್ಯನ್ ಏಗಳುಂ. ರಾಜಗುರು, ಧರ್ಮರುಚಿ, ಶಿಷ್ಯಶತಭಕ್ತನ್,
ಯೋಧಾಗ್ರಗಣ್ಯನ್, ಬ್ರಹ್ಮಜ್ಞರೊಳ್ ತಾನೆ ಬ್ರಹ್ಮನ್, ಸೌಮ್ಯನ್,
ಇಂತವನ್ ಜಗಮೆಱಗೆ ನೆಗಟ್ದನ್. ಕಾಯದೆಯೆ ತಂದೆಯೊರ್ ಪುಣ್ಯಂ,
ಕೈವಿಟ್ಟು ನಂಬಿದಾ ದೇವನ್, ನಾನೊ ಮಾನಂಗೆಟ್ಟು ಸಾವೆನ್!
ಬರ್ದುಕಿನೊಳಮ್ ಆವ ಸುಖಮನ್ ಕಣ್ಡೆನ್? ಆರ್ಗೆ ನಾನ್ ಪ್ರಾಣಮನೆ ತೆಱುವೆನ್,
ಆತ್ಮಕಲ್ಯಾಣಮುಮನ್ ಒತ್ತರಿಸಿ ನಾನ್ ಆರ ಕುಱೆವೆನ್,
ಆ ಸ್ವಾಮಿಗಾನಲ್ತು ಮೊದಲೊಲ್ಮೆ, ಕರ್ಣನ್. ಸೇನಾಧಿಪತ್ಯಮೇ, ಕರ್ಣನ್;
ಶೃಂಗಾರಮೇ, ಕರ್ಣನ್; ಎಂಜಲ್ ಎಂಜಲ್ ನನಗೆ ಸಿಡುಕಂಗೆ–ಹುಂ!
ಈ ನಮ್ಮ ಸುಖಪುರುಷರ್, ಆ ಕ್ಷುದ್ರದೇವತೆಗಳ್ ಏನ್ ಬಲ್ಲುವೆನ್ನನ್!

ಮೇಳಂ : ಬೇಡ, ಬೇಡಯ್, ಗುರುವೆ!

ಅಶ್ವತ್ಥಾಮನ್ : ಸುಮ್ಮನಿರ್, ಸುಮ್ಮನಿರ್, ಸರ್ವಶಕ್ತರ್, ಬಲ್ಲೆನ್.
ಕಣ್ಮಾಯೆ ಮುಸುಕದೇ, ಬಗೆ ಕದಡಿ ಗುರಿಯಿಂದೆ ಪೊರಳದೇ, ಆರುಂ
ನಗಲಿರರ್, ಪಾಂಡವರ್, ಕೃಷ್ಣರ್! ಕಾದನ್ ಆ ರುದ್ರನ್, ಆ ರುದ್ರನ್,
ಉರಿಗಣ್ಣನ್, ಆರ ನಚ್ಚಲ್ಲದನ್, ಕೆಯ್ ತಡೆದು ಪೊಯ್ಯಲಿರ್ದೆನ್ನನ್
ಮರುಳ್ಗೊಳಿಸಿ, ಈ ಮೂಕಪಶುಗಳೊಳ್ ತೊಯಿಸಿದನ್ ನೆತ್ತರಿನ್ ಕಯ್ಯನ್.
ಈಗಳ್ ಅವರ್ ಉರ್ಬುವರ್ ಗೆಲವಾಗಿ–ಎನ್ನೊಲವಿನಿಂದಲ್ತು! ದೈವಂ
ತಪ್ಪಾಗಿ ನಡಸುವೊಡೆ, ಕಲಿ ಎಡಪುವನ್, ಪೇಡಿ ಬರ್ದುಕುವನ್, ನಗುವನ್.–
ಈಗಳ್ ಏನ್ ಗೆಯ್ವೆನ್? ಕಂಡಂತೆ, ದೇವರ್ಕಳ್ ಒಲ್ಲದನ್; ಬೀರರ್
ನಗುವ ಪಾಡಾದವನ್; ಈ ಎಲ್ಲಮನ್ ಪೊಱುವ ತಾಯ್ ಮುಟ್ಟೆ ಮುನಿವನ್.
ಈ ಪಾಳಯಂ ಬಿಟ್ಟು ತವರೂರ್ಗೆ ಪೋದಪೆನೆ, ವಿಂಧ್ಯಮನ್ ದಾಂಟಿ,
ಆವ ಮೊಗದೊಳ್ ಬರ್ಪ ನಂಟರನ್ ನೋಟ್ಪೆನ್? ತಂದೆ ತಾನಿಲ್ಲಂ;
ಎನಗೊಂದು ಪೆರ್ಮೆ ತಾನಿಲ್ಲಂ. ಆಗದು, ಅದಾಗದೆಂದಿಂಗಂ.
ಮತ್ತೇನ್? ಪಗಲ್, ಸೂರ್ಯದೇವನೇ ಸಾಕ್ಷಿಯಿರೆ, ವೈರಿಗಳ ನಡುವೆ
ನೇರ್ನುರ್ಗಿ, ಒರ್ಮೆಯ್ಯೆ ಮೂದಲಿಸಿ, ಸುತ್ತಣಿನ್ ಬಂದು ನಡುವಂಬಿನ್
ಬಿಟ್ದಿಪೆನೆ? ಅದು ಪಗೆಗೆ ಸಂತಸಂ, ಜಯದ ಮುಡಿ. ಬೇಱೇನ್? ಬೇಱೇನ್?
ಸಾಹಸಮನ್ ಏನಾನುಮೊಂದೆಸಗಿ, ಮಗನ್ ಅರಿಯ ಕಲಿಯೆ, ಎರ್ದೆಯುರ್ಕಿನ್
ತಾನ್ ಅಟೆದನೆಂಬುದನ್ ತೋಱಲೇವೇಟ್ಕುಮ್ ಎಮ್ಮಯ್ಯಂಗೆ ಗುರುಗೆ.
ಎಡೆಬಿಡದೆ ದುಃಖಂಗಳ್ ಒತ್ತುತಿರೆ ಬಾಟಿ ನೀಳ್ಪನ್ ಬಯಸಿ ತಾಳ್ವನ್
ಅಂಜುಕುಳಿ, ಕೀಟನ್. ಪಗಲ್ ಪಗಲುಮ್ ಏನ್ ನಲಿವೊ ಮುಂತಣ್ಗೆ ಸರಿದು,

ಪಿಂಜರಿದು, ಸಾವಿನತ್ತಲೆ ಪೋಪ ಪಯಣಂ? ತೆಗೆ, ತೆಗೆ, ಒಲ್ಲೆನ್.
ನಾನ್ ಮೆಚ್ಚೆನ್ ಇಲ್ಲದಾಸೆಗೆ ಕಿರ್ಚು ಕಾಯಿಸುವ ಮುಕ್ಕನನ್. ತಕ್ಕನ್
ತಕ್ಕವೊಲ್ ಬಾೞ್ದಪನ್, ತಕ್ಕವೊಲ್ ಸತ್ತಪನ್. ಎನ್ನ ಬಗೆ ಕೇಳ್ದಿರ್.

ಮೇಳನಾಯಕನ್ : ಈ ನಿನ್ನ ಮಾತುಗಳ್ ನಾಲಗೆಯ ತುದಿಯಲ್ತು,
ಪೊಡೆಯಿಂದ ಬಂದುವೇ, ಬಲ್ಲೆಮ್ ಆಮೆಲ್ಲರುಂ.
ಆದೊಡಂ, ದುಡುಕದಿರ್. ಕೆಳೆಯರ್ಗೆ ಕಿವಿಗೊಟ್ಟು
ಈ ಛಲಪಿಶಾಚಮನ್ ಬಗೆಯಿಂದೆ ಪೊಱಮಡಿಸು.

ಭಾರ್ಗವಿ :
ಓ ಎನ್ನ ಕಂದ, ಅಶ್ವತ್ಥಾಮ! ವಿಧಿಯಿಂದೆಯುಂ ನರರ್ಗೆ ಕ್ರೂರಂ
ಬೇಱೆಲ್ಲ. ಭೃಗುವಂಶದೊಳ್ ಪರಶುರಾಮಂಗೆ ತಂಗೆಯೆನಲ್ ಒಗೆದೆನ್.
ಈಗಳ್ ಏನಾದೆನ್! ಕೇಳ, ದೈವೇಚ್ಛೆಯನ್. ಜಮದಗ್ನಿ, ಅಯ್ಯನ್,
ಎನ್ನನ್ ಆ ಋಷಿ ಭರದ್ವಾಜಂಗೆ ಕೊಟ್ಟನ್–ದಾನಮನ್ ಕೊಟ್ಟನ್.
ಆತನೊಡನಲೆದೆನ್ ಆನ್ ಕಾಡುಮನ್ ಮೇಡುಮನ್. ಆ ಬೀರಸಿರಿಯ
ಮಂಗಳದ ಕಳಶಮೆನೆ ಬಸಿಱೊಳಗೆ ಲೋಕೈಕಬಾಣನನ್ ದ್ರೋಣನನ್ ಪೊತ್ತೆನ್.
ಮೊಗಗಾಣ್ಬ ಮುನ್ನಮೇ ಯಮನ್ ಉಯ್ದನ್ ಇನಿಯನನ್. ಪೊತ್ತನನ್ ಪೆತ್ತೆನ್,
ನಡಪಿದೆನ್, ಒರ್ವನಾಳ್ ಮಾಡಿದೆನ್. ಬಡತನದೊಳ್ ಎತ್ತಲುಂ ತಿರಿದು
ಬಾೞ್ವಂಗೆ ನೀನ್ ಮೂಡಿ, ತಾಯೆನ್ ಅಂದೇ ತಿಂದುಕೊಂಡಯ್. ಮಗುಗೆ
ಪಾಲ್ಗಿಲ್ಲ. ರಾಜರೊಳ್ ಕೆಳೆತನಂ, ಉಣಲ್ ಇಲ್ಲ. ಕಣ್ಗೆಟ್ಟ ಮಕ್ಕಳನ್
ಕುರುಧರೆಗೆ ಕರೆತಂದೆನ್. ಅರಸರೊಳ್ ಗುರುತನದ ಮನ್ನಣೆಯನ್ ಉಂಡೆನ್.
ಪೆರ್ಗಿಚ್ಚು ಭಾರತಂ ಪೊತ್ತಿತ್ತು; ಭಸ್ಮಮಾದನ್ ಮಗನ್; ಬೆಂದೊಡಲ್ಗೆನಗೆ
ನೀನೊರ್ವನ್ ಇರ್ದಪಯ್. ಪುರುಳಾಗು, ಮರುಳಾಗು, ಕಲಿಯಾಗು, ಪೇಡಿಯಾಗಣ್ಣ,
ನೀನೊರ್ವನ್ ಇರ್ದಪಯ್. ಪೋಗದಿರು, ಪೋಗದಿರು, ಕಾಲ್ಕಟ್ಟಿ ಬೇಡುವೆನ್
ಪೋಗದಿರು, ಓ ಎನ್ನ ಕಂದ ಅಶ್ವತ್ಥಾಮ! ಎನ್ನನ್ ಆರ್ಗಿತ್ತು ಪೋಪಯ್?
ನೀನ್ ಪೋದ ಮಱುಗಳಿಗೆ ಅಡಗಿರ್ದ ಶೂರರ್ ಎಲ್ಲರ್ ಬಂದು, ಸೆಳೆದು,
ಕೊಂಡು ಪೋಗೀ ತೊಟ್ಟಿನೆಂದು ಬಯ್ದುಯ್ಯರೇ–ನಿನ್ನ ಮಗನೊಡನೆ!
ನಿಮ್ಮ ಕುಲಕಿದು ಜಸಮೆ? ನಿನಗೊಂದು ಕೀರ್ತಿಯೇ ಇದನ್ ಎಣಿಸವೇಡಾ?
ನಿಮ್ಮಯ್ಯನನ್ ನೆನೆಯ–ಪುಸಿಸಾವುಗೇಳ್ದು ಬಿಲ್ಲನ್ ಬಿಸುಟು ಸತ್ತನ್.
ನಿನ್ನ ತಾಯ್ ಸೂಲ್ಮುಲುಕು ಮಱೆತು ನಿನ್ನನ್ ಪರಸಿ, ಬಾೞ್ ನೂಱನ್, ಅಣುಗ,
ಪಿರಿಯ ಪೆಸರಾಗೆಂದು ಮುತ್ತಿಟ್ಟು ನಡೆದಳ್. ಪಿತೃಲೋಕಕೀಗಳ್
ನೀನ್ ಪೋಗೆ, ಆನಂದಮೇನ್ ಅವರ್ಗೆ ಇದಿರ್ಗೊಳಲ್? ನಿನ್ನ ಮಗುವಿರ್ಕುಂ.
ಪಸುಗೂಸು, ತಾಯಿಲ್ಲ; ತಂದೆಯುಂ ತೊಱೆದನೆನೆ ಬೆಳೆವನ್ ಅವನ್ ಎಂತು?
ನೋೞ್ಪರ್ ಆರ್? ಕಲಿಪರ್ ಆರ್? ಒಲ್ದು ಪೆರ್ಮೆಯ ನೆಲೆಗೆ ತರ್ಪರ್ ಆರ್? ಪೇೞ.
ಓ ಎನ್ನ ಕಂದ, ಅಶ್ವತ್ಥಾಮ, ನೀನ್ ಸತ್ತು ನಮ್ಮುಮನ್ ಸಾಯಿಪಯ್.
ನೀನಿಲ್ಲದಾರ್ ಇರ್ಪರ್ ಎನಗೆ? ಆವ ಮನೆ, ಆವ ಮೊಱೆ ಎನಗೆ?
ನಿನ್ನೊಳೇ ಎನ್ನ ಬಾೞ್. ಪೆಱವೇಡ ಒಲ್ಮೆ ಮತ್ತೊಲ್ಮೆಯನ್? ತಕ್ಕನ್
ನಲಿವನ್ ಒರ್ಕಡೆ ಪಡೆದು ಮಱೆದಪನೆ? ಮಱೆಯಲ್ಕೆ ತಕ್ಕನ್ ಎಂತಪ್ಪನ್?

ಮೇಳನಾಯಕನ್ : ಅಶ್ವತ್ಥಾಮ, ಎನ್ನವೋಲೆ ನೀನ್ ಅವಳ್ಗೆ ಮಱುಗು, ಮಱುಗು.

ಅಶ್ವತ್ಥಾಮನ್ : ಮಱುಗಿದಪೆನ್–ಮಱುಗಿದಪೆನ್–ಪೇೞ್ದ ಮಾತು ಕೇಳ್ವಳೋ?

ಭಾರ್ಗವಿ : ಪೇೞ, ಅಣುಗ, ಅಶ್ವತ್ಥಾಮ, ಏನೆ ಪೇೞ ಮಾಡುವೆನ್.

ಅಶ್ವತ್ಥಾಮನ್ : ಎನ್ನ ಮಗನ್, ಎಲ್ಲಿ ಅವನ್? ಕರೆದುತಾರ, ನೋಡುವೆನ್,

ಭಾರ್ಗವಿ : ಬೆದಱಿದೆನ್ ಆನ್, ಕೂಸನ್ ಅದನ್ ಬೀಡ ಪೊಱಗೆ ಕೞಿಪಿದೆನ್.

ಅಶ್ವತ್ಥಾಮನ್ : ಎನಗೆ ಬಂದ ಕಷ್ಟದೊಳೋ? ಬೇಱೆ ನೀನೆ ಬಗೆದೆಯೋ?

ಭಾರ್ಗವಿ : ಪಸುಳೆ, ಪಾಪ, ಓಡಿ ಬರಲ್ ಕಂಡು ಕೊಲ್ವೆ ಎಂದವಳ್.

ಅಶ್ವತ್ಥಾಮನ್; ಆಹ, ಇನ್ನದೊಂದು ಭಾಗ್ಯಮ್ ಎನಗೆ ತಕ್ಕುದುೞಿದುದು!

ಭಾರ್ಗವಿ : ಕಾವಲ್ ಇರ್ದು ತಪ್ಪಿಸಿದೆನ್ ನಾನ್ ಅದನ್.

ಅಶ್ವತ್ಥಾಮನ್; ಪೊಗೞ್ವೆನ್ ಅಜ್ಜಿ, ನಿನ್ನ ಮುಂದುಗಾಣ್ಕೆಯನ್.

ಭಾರ್ಗವಿ : ಈಗಳ್ ಏನೊ ನಿನ್ನ ಬೆಸನ್ ಮಾೞ್ಪುದು?

ಅಶ್ವತ್ಥಾಮನ್ : ಮಗನನ್ ಒರ್ಮೆ ನೋಡುವೆನ್, ಮಾತಾಡುವೆನ್,

ಭಾರ್ಗವಿ : ಓಡಿ ನಾನೆ ಪೋದಪೆನ್–ತಂದಪೆನ್. [ಪೋಪಳ್]

ಅಶ್ವತ್ಥಾಮನ್ : ಬರ್ಪಳೋ? ಬಾರಳೋ?

ಮೇಳನಾಯಕನ್ : ಬಂದಳ್ ಇದೋ ಬಂದಳ್.

[ಭಾರ್ಗವಿ, ರುದ್ರಶಕ್ತಿ]

ಅಶ್ವತ್ಥಾಮನ್ :

ಎತ್ತಿಕುಡು, ಬಾ ಎತ್ತಿಕುಡು, ಕಯ್ಗೆ. ಎನ್ನ ಮಗನಾಗೆ ಇವನ್ ಅಂಜನ್
ಈ ಘೋರಮನ್ ಕಂಡು. ಈಗಳಿಂದಮೆ ತಂದೆಯೊರಟುತನಕಿವನನ್
ಕುದುರೆಮಱಿವೊಲ್ ತಿರ್ದಿ ಪೞಗಿಸಲ್ವೇೞ್ಕುಂ. ತಂದೆಯಿನ್, ಕಂದ,
ಮೇಲಾಗದೃಷ್ಟದೊಳ್; ಮಿಕ್ಕೆಲ್ಲ ನಡತೆಯೊಳಮ್ ಅವನಂತೆ ಆಗು.
ಪೞಿ ತೊಡದ ಪಿರಿಯ ಪೆಸರಾಗು. ಏನ್ ಸುಖಂ, ಏನ್ ಶಾಂತಿ, ಮುಖದೊಳ್!
ನೀನ್ ಅಱಿಯೆ ಈ ಎನ್ನ ಸಂಕಟಮನ್–ಅಱಿಯಮೆಯೆ ಸುಖಂ! ಅಱಿದ ಬೞಿಕೆ
ತಂದೆಯಾರ್, ನಿನ್ನುರ್ಕದೇನೆಂದು ತೋಱುವೇೞ್ಕುಂ, ಮಗನೆ, ಪಗೆಗೆ.
ಅದುವರಂ, ತಣ್ಗಾಳಿಯೊಳ್ ಸುೞಿದು, ಪಸುಳೆತನಮನ್ ಸವಿದು, ಇವಳ,
ಈ ನಮ್ಮ ಮನೆಯ ದೇವತೆ ಇವಳ, ಕಣ್ಣಮಣಿಯಾಗಿ ನೀನ್ ಬಾೞಿಯ್.
ನಿಮ್ಮನ್ ಆರಂ ಜಱಿಯರ್ ಆನ್ ಪೋಗೆ, ಅಂತಪ್ಪ ರಕ್ಷಕನನ್ ಇಡುವೆನ್.
ಎನ್ನ ತಂದೆಯ ಶಿಷ್ಯನ್, ಎನ್ನ ಕೆಳೆಯನ್, ಬೇಂಟೆಯೊಳಗೀಗಳ್ ಇರ್ದುಂ,
ಪೊತ್ತೆಱೆಯೆ ಬಾರದಿರನ್ ಆ ಏಕಲವ್ಯನ್. ಬೇಂಟೆಪುಲಿಗಳಿರ,
ಕೆಳೆಯರಿರ, ನಿಮ್ಮೊಳಂ, ಅವನೊಳಂ, ಈ ಅೞ್ಕಱಿನ ಪೊಱೆಯನ್ ಇಟ್ಟೆನ್.

ಪೇಟೆಮ್ ಆತಂಗಿದನ್. ನಮ್ಮಿನಿಯ ನಾಡಿಂಗೆ ಈ ಮಗುವನ್ ಉಯ್ಯಿಂ.
ಎಮತೊಂದು ಬೆಳೆಗೆ ಕಿಡಿ. ಎನ್ನಾಯುಧಂಗಳನ್ ಪಗೆಗಯ್ಗೆ ಬೀಟ
ಕುಡದಿರಿಂ. ಬಾ, ರುದ್ರಶಕ್ತಿ, ಪಿಡಿ ಈ ಬಿಲ್ಲನ್ ಅಂಬುಮನ್. ಪಿರಿಯ
ದೇವತೆಗಳಿನ್ ಬಂದುದಿದು–ಪರಶುರಾಮನದು–ದ್ರೋಣನದು–ನಿನ್ನ
ತಂದೆಯದು–ಮೆಲ್ಗಯ್ಗಳಿನ್ ಪಿಡಿಯ ಈ ದಿವ್ಯಧನುವನ್–ಅಹ, ಎಲ್ಲಿ,
ಪೂಡು–ಒಂದಂಬನ್–ಇಂತಿಂತು–ನಲ್ಲದಹ, ನಲ್ಲದು! ಗೆಲ್! ಗೆಲ್!

[ಬಾಗಿಲೊಳ್]

ಎನ್ನೊಡನೆ ಬರ್ಕೆ ಮಿಕ್ಕೆಲ್ಲಮುಂ. ಕರೆದುಕೊಳ್. ಬಾಗಿಲನ್ ಮುಚ್ಚು.
ಏನ್ ಇದೇನ್ ಕಣ್ಣೀರ್? ಅಟಬೇಡ–ಅಟಬೇಡ: ಅಟ್ಕೆ ಪೆಣ್! ಬಾ, ಒಳಗೆ.
ಪುಣ್ ಕೊಯ್ಯಲಿರ್ಪಂದು ಮಂತ್ರಮನ್ ಮಿನುಕುವನ್ ಅವನ್ ಮರುಳ್ ವೈದ್ಯನ್.
ಮೇಳನಾಯಕನ್ : ಕರ್ಬುನ ಕಡಿದಂತಿಂತು ನೀನ್ ನುಡಿಯೆ ಏನೆಂಬೆನ್?
ನಿನ್ನ ಕೂರ್ನಾಲಗೆಗೆ ನನ್ನ ಧೈರ್ಯಂ ಪೋಯ್ತು.
ಭಾರ್ಗವಿ : ಕಂದ, ಅಶ್ವತ್ಥಾಮ, ಏನ್ ನಿನ್ನ ತಱಿಸಲವು?
ಅಶ್ವತ್ಥಾಮನ್ : ಕೇಳದಿರು, ಕೆಣಕದಿರು. ನಿನಗಡಕಮ್ ಒಳ್ಳಿತ್ತು.
ಭಾರ್ಗವಿ : ಅಯ್ಯೊ ಎರ್ದೆ ನಡುಗುವುದು. ಬೇಡುವೆನ್, ಮಗನಾಣೆ,
ಆ ದೇವತೆಗಳಾಣೆ, ಎಮ್ಮನಿನ್ ತೊಱೆಯದಿರ್.
ಅಶ್ವತ್ಥಾಮನ್ : ಎನ್ನನಿನ್ ಮುಳಿಯಿಪಯ್. ಅಱಿಯೆಯಾ ದೇವತೆಗ
ಮೆನಗಮ್ ಇರ್ದಾ ಋಣಂ ಪಱಿದು ಪೊಯ್ತೆಂಬುದನ್?
ಭಾರ್ಗವಿ : ಬಾ, ವತ್ಸ. ಸಾಲ್ಗುಂ ಈ ಕ್ಷಾತ್ರಂ. ತವರಡವಿನೆಟಲೊಳ್
ಸಮಱುವಂ ಮುಱಿದೆಱಕೆಯಾತ್ಮಮನ್, ತಪಮೆಸಗಿ,
ಅಶ್ವತ್ಥಾಮನ್ : ತಪಂ! ಏನ್ ತಪಂ? ಏತಕ್ಕೆ? ಆರ್ಗೆ?
ಬಾೞ್ ಬಱಿಯದಾದಂದು, ಸಾವು ತಾನ್ ಪೂರ್ಣಂ?
ಭಾರ್ಗವಿ : ಹಾ! ಹಾ!
ಅಶ್ವತ್ಥಾಮನ್ : ಕೇಳ್ವರ್ಗೆ ಮೇಲೋರ್ಗೆ ಬೇಡಿಕೊಳ್.
ಭಾರ್ಗವಿ : ನೀನ್ ಕೇಳೆಯಾ?
ಅಶ್ವತ್ಥಾಮನ್ : ಎನ್ನ ಕಿವಿ ತುಂಬ ನೀನೇ!
ಭಾರ್ಗವಿ : ಕೆಟ್ಟೆನ್! ಕೆಟ್ಟೆನ್!
ಅಶ್ವತ್ಥಾಮನ್ : ಒಳಗೆ ಬಾ, ಸಾಲ್ಗುಂ.
ಭಾರ್ಗವಿ : ಕರಗು ಕರಗೆಲೆ, ಕಂದ. ದೇವರ್ಕಳ್ ಒಸೆದಪರ್.
ಅಶ್ವತ್ಥಾಮನ್ : ಮರುಳ್ ನೀನ್! ಕರಗಿಸುವಳ್ ಈಗಳ್ ಎನ್ನುರ್ಕನ್.

[ಪೋಪರ್. ಬಾಗಿಲ್ ಮುಚ್ಚುವುದು]

ಮೇಳಂ : ೧(೧)

ಚೆಲ್ವಿನ ನೆಲೆ, ಕಣ್ಗಳ ಬಲೆ, ಸುಖದೊಱತೆಯ ಬನವಾಸೀ,
ಬಳೆದಲೆದಾ ಕಾನ್‌ಮಲೆಗಳನ್ ಆನ್ ಮಱೆವೆನೆ, ಬನವಾಸೀ!
ಭಾರತದೀ ಸುಟೆಗಾಳಿಗೆ ಸಿಲ್ಕುತೆ ನಾನ್ ತಱಗಾದೆನ್;
ಪೆಱೆ ತುಂಬುತೆ, ಪೆಱೆ ತೇಯುತೆ, ಮನೆಗಾಣದೆ ಬಡವಾದೆನ್;
ನಿನ್ನನೆ ನೆನೆನೆನೆದೋ ತಾಯ್, ಪಂಬಲಿಸುವ ನೋವೊಂದೇ!
ಇನ್ನೆನಗೇನ್ ಆಸೆಗಳೋ, ಪಾರ್ವುದು ನಾನ್ ಸಾವೊಂದೇ!

೧(೨)

ಪೆರ್ಮೆಯ ನೆಲೆ, ಪಡುಗಡಲಲೆ ಸುಖಮೆಱಚುವ ಬನವಾಸೀ,
ನೀನ್ ಕಟೆಪಿದ ಪೇರಾಳ್ಗಳ್ ಅದೇನಾದರ್, ಬನವಾಸೀ!

ಗುರು ಮಡಿದನ್ : ಅಮರೆ ಮರುಳ್ ಗುರುಪುತ್ರನ್ ತಾನ್ ಮಡಿವನ್.
ನಿರ್ದಯದೈವದ ಕಯ್ಯಿನ್ ಬಿಡುಗಡೆಗಾಣದೆ ಮಡಿವನ್.
ಒರ್ವನೆ ಕುದಿಕುದಿಗೊಳ್ವನ್; ಒಲ್ವರ ನುಡಿಯುಮನ್ ಬಲ್ಲನ್.
ಪಾೞೆತು ಮುನ್ನಿನ ಪೊಂಕಂ! ಮುನ್ನಿನವನ್ ತಾನ್ ಅಲ್ಲನ್!

೨(೧)

ಬಾೞ್ಕೆಯ ಕಡೆಯೊಳ್ ಬಾಗಿದ ಮುದಿಯಳ್,
ತಾಯ್ ಇಲ್ಲದನನ್ ನಡಪಿದ ಮುದಿಯಳ್,
ಕಂದನ ಕೇಡನ್ ನೋಡಲೊ ಬಟ್ದಿಳ್?
ನರೆದಲೆ ದುಃಖದ ಮಡುವೊಳ್ ಬಿಟ್ದಿಳ್.
ಆರ್ ಕೇಳ್ದಪರ್ ಆ ಗೋಳನ್, ಸಲ್ಲದು,
ಸೋರೆಯ ನುಲಿನುಲಿ ಮೆಲ್ಲುಲಿಯಲ್ಲದು.
ಆರ್ವಳ್, ಚೀರ್ವಳ್, ಎರ್ದೆಯನ್ ಪೊಯ್ವಳ್,
ನವಿರನೆ ಕೀೞ್ವಳ್, ಬಿದಿಯನ್ ಬಯ್ವಳ್!

೨(೨)

ಈ ಬಾೞೆಂದಂ ಸಾವುದೆ ಸುಖಮೇ!
ಮತಿ ಪಾೞಾಗಲ್ ಸಾವುದೆ ಸುಖಮೇ!
ಪೆರ್ಮೆತನಮೇನ್, ಕಲಿತನದುರ್ಕೇನ್,
ಆಳ್ಗಳ ಸಾಲೊಳ್ ತಲೆಮೆಱೆ ಸೊರ್ಕೇನ್?
ದ್ರೋಣನ, ರಾಮನ ಕಲ್ಕೆಯೊಳಾದನ್
ಒಳಬೆಳಕಿಲ್ಲದ ಕಣ್ ಕುರುಡಾದನ್,
ಮರುಳನ್ ಮೆಯ್ಯೊಳ್ ಕೂಡಿಸಿಕೊಂಡನ್.
ತನ್ನಱಿವನ್ ತಾನ್ ಓಡಿಸಿಕೊಂಡನ್.

[ಅಶ್ವತ್ಥಾಮನ್ ಖಡ್ಗಂಬಿಡಿದು. ಭಾರ್ಗವಿ]

ಅಶ್ವತ್ಥಾಮನ್ : ಕಾಲಚಕ್ರಂ ಪೊರಳೆ, ಮುಚ್ಚಿದುದು ಬೆಳಕಕ್ಕುಂ, ಇರ್ದುದಿಲ್ಲಕ್ಕುಂ;
ಆಗದು ಇದೆನಲಪ್ಪುದೊಂದಿಲ್ಲ–ಘೋರ ಪ್ರತಿಜ್ಞೆಯುಂ, ಛಲಮುಂ,
ತಾಮೆ ತಾಮ್ ಓಡುಗುಂ! ಕದಲದೆಯೆ, ವಜ್ರಂಬೊಲ್ ಇರ್ದವನ್ ನಾನುಂ
ಈ ಪೆಣ್ಣ ಗೋಳ್ ಕೇಳ್ದು, ಎರ್ದೆ ಕರಗಿ, ಉರ್ಕುಡುಗಿ, ಬೇಱೆ ಬಗೆಯಾದೆನ್.
ಮೞುಗಿದೆನ್–ಪಗೆಗಿವಳ್ ತೊೞ್ತಾಗೆ, ಪಸುಳೆ ತರುವಲಿಯಾಗೆ, ಪೋಗೆನ್.
ಇನ್ನೊಂದು ಮಾಡುವೆನ್, ಈ ಕ್ಷೇತ್ರದೊಳ್ ಮೆಱೆವ ತೀರ್ಥದೊಳ್ ಮುೞುಗಿ
ತೊಳೆದಂಟಿದೀ ಕಱೆಯನ್, ಎನ್ನುಗ್ರದೇವತೆಯ ಕೋಪಮನ್ ತೆಗೆವೆನ್.
ಆಳ್ ಸುೞಿಯದೆಡೆಯೊಂದನ್ ಅಱಿಸಿ, ಆೞಂ ತೋಡಿ, ಕಾಣದಂತಾರುಂ,
ಪೂೞ್ದಿಡುವೆನ್ ಈ ಕ್ರೂರ ಖಡ್ಗಮನ್–ಮೃತ್ಯುವುಂ, ಆ ಕಾಳರಾತ್ರಿಯುಂ ಪಿಡಿಗೆ
ಕಿೞ್ತಿಲದೊಳ್ ಎಂದುಂ! ಇದನ್ ಎನಗೆ ಅಭಿಮನ್ಯು ಕೊಟ್ಟಂದು ತೊಟ್ಟು
ಒಳ್ಳಿತೆಂದಬುದನ್ ಅಱಿಯೆನ್. ಅದು ನಿಜಂ, ಪಿರಿಯರ್ ಆಡುವ ಮಾತು: ಪಗೆಯ
ಮೆಚ್ಚೊಂದು ಮೆಚ್ಚಲ್ತು, ಒಳ್ಳಿತಾಗದು.–ಆಯ್ತು, ಮುಂತಣ್ಗೆ ಕಲ್ವಂ.
ಇನ್ ಮುಂದೆ, ಬಾಗುವೆನ್ ದೇವತೆಗೆ, ಪಾಂಡವರ್ಗೆಱಗುವೆನ್. ಆಳ್ವರ್
ಅವರಲ್ತೆ? ನಾಮ್ ತಟ್ಗಿವೇಟ್ಕುಂ. ಮೇಗಣಧಿಕಾರಕೆಂತಪ್ಪ
ರೌದ್ರಮುಂ ಶಕ್ತಿಯುಂ ಮೊಟ್ಗುವುದು. ಕೊಱೆಪಲ್ಲ ಕುಳಿರ ಹೇಮಂತನ್
ಪೊೞ್ತು ಬರೆ, ಮುಪ್ಪಾಗಿ, ಎಳಚಿಗುರ ಚೈತ್ರಂಗೆ ಬೞೆವಿಟ್ಟು ಪೋಕುಂ.
ಕಾರ್ಮುಸುಕು ರಾತ್ರಿ ಬೆಳ್ಗುದುರೆಗಳ ಸೂರ್ಯಂಗೆ ಬೆನ್ನಿತ್ತು ಸರಿಗುಂ.
ಬಿಱುಗಾಳಿ ಬಡಿದಾರ್ದು ಕಡೆಗೆ ಕಡಲನ್ ತಣಿಪಿ ಎತ್ತಲೋ ಅಱಿಗುಂ.

ವಿಶ್ವಮನೆ ಸೆಱೆವಿಡಿದು ಕೆಡಪುವಾ ನಿದ್ರೆಯುಂ ಪಿಡಿದೆಂದುಮ್ ಇರದೆ
ಸಡಿಲವಿಟ್ಟೆಯ್ದುಗುಂ. ನಾಮ್ ಆರ್ ವಿವೇಕಮನ್ ಕಲ್ಲೆಮನೆ, ಮರ್ತ್ಯರ್?
ನಾನ್ ಇದೋ ಕಲ್ತಪೆನ್. ಪೊಸತೀಗಳ್ ಅಱೆತೆನೇ, ಪಗೆವನವನ್ ಒರ್ಮೆ
ಕೆಳೆಯನಪ್ಪನ್; ಕೆಳೆಯೆ ಪಗೆಯಪ್ಪನ್; ಅದಱೆಂದೆ ಕಟ್ಬೊಲ್ಮೆ ತಗದು.
ಕಡುಪಗೆಯುಮ್ ಆಗದು. ಮನುಜಂಗೆ ಸ್ನೇಹಮೆಂಬುದು ಪುಸಿಯ ನಚ್ಚು.–
ಈಗಳ್ ಎನಗೆಲ್ಲಮುಂ ನೇರ್ಪಕ್ಕುಂ. ಎಲೆ ತಾಯೆ, ನೀನ್ ಒಳಗೆ ಪೋಗು,
ದೇವತೆಗಳನ್ ಬೇಡು ಎನ್ನೆರ್ದೆಯ ಬಯಕೆಗಳ್ ಕೂಡಿಬರ್ಕೆಂದು.
[ಭಾರ್ಗವಿ ಪೋಪಳ್]
ಕೆಳೆಯರಿನ, ನೀಮುಮ್ ಇನ್ನವಳಂತೆ, ಎನ್ನ ಬಗೆಯನ್ ತಿಳಿದು ಸಲಿಸಿಂ.
ಏಕಲವ್ಯನ್ ಮರಳೆ, ನೀಂ ಪೇೞೆಮ್, ಎಮ್ಮೊಳಂ ನಿಮ್ಮೊಳಂ ಮಱುಕಮ್ ಇರ್ಕೆಂದು.
ನಾನ್ ಪೋಪೆನ್ ಎತ್ತ ಪೋಪುದೊ ಅತ್ತ. ಇನಿತಱೊಳೆ ಕೇಳ್ದಪಿರ್ ನೀಮುಂ
ಒಸಗೆಯನ್–ಈ ಸಂಕಟಂ ಕಳೆದು ಬಿಡುಗಡೆಯನ್ ಆಂತುದನ್ ನಿಮ್ಮ ವೀರನ್.
[ಪೋಪನ್]

೧

ಮೇಳಂ : ಹೋ! ಆನಂದಂ! ಪೇರಾನಂದಂ!
ನೆಗೆವಾ ಕುಣಿವಾ ಮಿಗುವಾನಂದಂ!
ಓ ಶಿವ, ಬಾರಯ್!
ಓ ಶಿವ, ಬಾರಯ್!
ಬೆಳ್ಳಿಯ ಬೆಟ್ಟದ ಕೋಡಿನ ಬೀಡಿನ್,
ತೆಂಕಣ ನಾಡಿನ ಕೋಯಿಲ ಕೋಡಿನ್,
ಒಂದೇ ನೆಗೆತಂ ನೆಗೆಯುತೆ ಬಾರಯ್.
ಬಾ, ನಟರಾಜಾ,
ಬಾ, ನಟರಾಜಾ,
ಲೋಕಂ ಪುಟ್ಟಲ್, ಲೋಕಂ ಸಾಯಲ್,
ದೇವತೆಗಳ ಗಣಮೆಲ್ಲಂ ಪಾಯಲ್,
ಒರ್ವನೆ ತಾಂಡವವಾಡುವ ರಾಜಾ,
ನಾಟ್ಯಂಗಲಿಸುವ ಓ ನಟರಾಜಾ,
ಕುಣಿವೆನ್, ಕಲಿಸೆನಗೀಗಳ್, ಬಾರಯ್,
ಕುಣಿವೆನ್, ಬಾರಯ್!
ಓ ಶಿವ, ಬಾರಯ್!

೨

ಕಣ್ಣಿನ್ ಚೆದಱೆತು ಕಟ್ತಲೆ ಪಾರಯ್!
ನಮೆಯಾ ಭ್ರಮೆಯಾ ಕಟ್ತಲೆ ಪಾರಯ್!
ಹೋ! ಆನಂದಂ!
ಪೇರಾನಂದಂ!
ಕಣ್ಣಿನ್ ಮುಸುಕಿದ ಕಟ್ತಲೆಯೋಡಲ್,
ಬಗೆಯೊಳ್ ಶಿವನಾ ಬೆಳ್ವೆಳಗಾಡಲ್,
ಮೂಡಿತು ಸೂರ್ಯಂ–ಜೀವಾನಂದಂ!
ಓ ಶಿವ, ಶಂಕರ,
ಓ ಶಿವ, ಶಂಕರ,
ಬರ್ದುಕಿದನೇ ನಮ್ಮಶ್ವತ್ಥಾಮನ್!

ತಿರುಗಿದನೇ ಆ ರುದ್ರಪ್ರೇಮನ್!
ತಿರುಗಲ್ ಭಕ್ತಿಗೆ, ಸೇವೆಗೆ, ಶಂಕರ,
ಆಗದುದಾವುದು, ಓ ಶಿವ, ಶಂಕರ,
ಕುಣಿವೆನ್, ಕರುಣಿಸು, ನನಗಾನಂದಂ!
ಕುಣಿವಾನಂದಂ!
ಪೇರಾನಂದಂ!

[ದೂತನ್]

ದೂತನ್ : ಅಣ್ಣಂದಿರ್, ಏಕಲವ್ಯನ್ ಬಂದನ್. ಒಡನೆ ಜೇನ್ ಮುಸುಱ್ವವೊಲ್ ಮುಸುಱೆ,
ಎಡಕೆ ಬಲಕೆಟೆದಾಡಿ, ಜಱೆದಾಡಿ, ದಟಿಮೆಲ್ಲ, ಆ ಮರುಳ ಬಂಟನ್,
ಇರುಳ್ ಬಿಟ್ಟು ತಲೆಗೊಱೆವ ಕಳ್ಳರ್; ಕಲ್ ಬೀಱೆಂ, ಕಲ್ ಬೀಱೆಮೆಂದು
ಒರ್ಕೊರಲ್ ಕೂಗಿದರ್. ನೆಗೆದತ್ತು ಕಯ್ಗೆ ಬಾಳ್. ಬಲ್ಗೊಲೆಗಳ್, ಬಾಳ್ಗಳೆಡೆವೊಕ್ಕು
ಸಂತೈಸದಿರೆ ಕೃಷ್ಣನ್. ಎಲ್ಲಿ ಅಶ್ವತ್ಥಾಮನ್? ಒರೆವುದೊಂದಿರ್ಕುಂ.
ಮೇಳನಾಯಕನ್ : ಒಳಗಿಲ್ಲ, ಇದೆ ಪೊಱಗೆ ಪೋದನ್–ಮಾರ್ಪಟ್ಟು,
ಪೊಸ ಬಗೆಗೆ ಪೊಸತೊಂದು ಕುಱೆಪಿಟ್ಟು.
ದೂತನ್ : ಆಹಾ! ಅವನ್
ಕಟೆಪಿದುದೆ ತಡಮೊ? ಮೇಣ್, ಬಂದುದೇ ತಡಮೊ ನಾನ್?
ಮೇಳನಾಯಕನ್ : ಏನಂತುಟವಸರಂ?
ದೂತನ್ : ತಾನ್ ಮರಳ್ವನ್ನೆಗಂ,
ತಡೆದಿರಿಂ ಬೀಡಿನೊಳೆ ಎಂದೊಡೆಯನ್ ಅಟ್ಟಿದನ್.
ಮೇಳನಾಯಕನ್ : ಪೇಟ್ದನೇ, ಇದೆತಾನೆ ಪೋದನ್–ನಲ್ಲದೇ :
ದೇವತೆಗೆ ಶಾಂತಿಯನ್ ಮಾಡುವುದೆ ಅವನೆಣಿಕೆ.
ದೂತನ್ : ಪುರ್ಚು, ಪುರ್ಚು! ದಿವ್ಯಜ್ಞಾನಮಿರೆ ಕೃಷ್ಣಂಗೆ!
ಮೇಳನಾಯಕನ್ : ಏನ್ ಅವನ್ ಪೇಟ್ದ ಕಣಿ? ನೀನ್ ಕಂಡ ಕಣಿಯುಮ್ ಏನ್?
ದೂತನ್ : ಸುಮ್ಮನೆ ಕೇಳ್–ಕೇಳ್ದುದನ್ ಪೇಟ್ವೆನ್–
ಪಲ್ಮೊರೆವ ಬೀರರನ್ ಪಡೆಗಳನ್ ಬಿಟ್ಟೇಕಲವ್ಯನೊಡವಂದು,
ಮೈತ್ರಿಯೊಳ್ ಕಯ್ವಿಡಿದು, ಕೃಷ್ಣನಿಂತೆಂದನ್–ಆ ಅಶ್ವತ್ಥಾಮನ್
ಈ ಪಗಲ್, ಈ ಪೊಳೆವಿದೊಂದು ಪಗಲ್, ಒಳಗಿರ್ಕೆ. ಪೊಱಗಣ್ಗೆ ಬಿಡದಿರ್.
ಏನಾನುಮನ್ ಮಾಡಿ ಬೀಡಿನೊಳೆ ಮಱೆಯಿರಿಸು, ಬಾಟ್ವುದನ್ ಬಯಸೆ.
ಇದೊಂದು ಪಗಲ್, ಆ ರುದ್ರನಾಗ್ರಹಂ ಬಡಿವುದು, ಎಟ್ಚಱಿಕೆ! ಎಂದನ್.
ಮತ್ತಮ್ ಅವನೆಂದನ್–ಮಱೆಯವಾ ಮಾತುಗಳ್–ಏಗಳ್ ಮನುಷ್ಯನ್
ತಾನ್ ಮುನುಷ್ಯನೆ ಎಂಬುದನ್ ಮಱೆತು, ಕಡುಕೊರ್ಬಿ, ಒಳ್ಪಿತರ್ಕಿಲ್ಲನ್,
ಆಗಳೇ ದೇವರ್ಕಳ್ ಅವನ ಬಾಟ್ಗೆಡರೊಡ್ಡಿ ಕೆಟಿಗುರುಳ ಪೊಯ್ವರ್.
ಎಂದುಂ ಅಶ್ವತ್ಥಾಮನ್ ಈ ಪಾಂಗೆ! ಎಳವೆಯೊಳೆ, ಪರಸುತ್ತೆ ತಂದೆ
ಬಿಲ್‌ಜಾಣನಾದೆ, ಗೆಲ್ : ಮೊದಲ್ ಎಱಗಿ ದೇವತೆಗೆ, ಪೌರುಷದೆ ನೀನ್ ಗೆಲ್–
ಅಯ್ಯನ್ ಇಂತೆನೆ, ಸೊರ್ಕಿ, ಮಗನ್–ದೇವತೆಯ ಬಲಮ್ ಇರ್ದೊಡಯ್ಯ,
ಪೇಡಿಯುಂ ಗೆಲ್ದಪನ್. ಅವರ್ಗಳ ನೆರಂಬಾರದಾ ಗೆಲ್ಲವೆಣ್ಣ
ಮುಂದಲೆಯನ್ ಈಟ್ವೆನ್! ಏನ್ ಗರ್ವಂ! ಇನ್ನೊರ್ಮೆ ಮಹದೇವ ರುದ್ರನ್
ಯುದ್ಧದೊಳ್ ಮೇಲಿರ್ದು, ಇತ್ತ ಪಗೆ, ಇತ್ತ ಪೊಯ್, ಕೊಲ್ ಗೆಲವನ್ ಇತ್ತೆನ್,
ಎಂದುರ್ಬಿಸುತ್ತೆ ಬರೆ, ಸಿಡುಕಿನಿಂದಾಳ್ ಆಡಬಾರದುದನ್ ಆಡಿ,
ಎಲೆ ರುದ್ರ, ಅದೊ ಅವರ ಬೆಂಬಲಂ ಪೋಗು; ಅಶ್ವತ್ಥಾಮನ್ ಇರ್ದ
ಮೊನೆ ಮುಱೆಯದೆಂದನ್. ಇಂತಪ್ಪ ನುಡಿಗಳಿನ್, ಆಳಾಗಿ ಪುಟ್ಟಿ

ಆಳ್ಗೆ ಮೀಱಿದ ಪರ್ಮೆ್ಬಗೆಗಳಿನ್, ರುದ್ರನ ಕನಲ್ಕೆಯನ್ ತಲೆಗೆ
ತಂದುಕೊಂಡನ್. ಈ ದಿನಂ ಬರ್ದುಕಿದೊಡೆ, ನಾಮುಱಿಸಿಕೊಳಲಕ್ಕುಮ್ ಅವನನ್
ರುದ್ರಪ್ರಸಾದದಿನ್–ಇಂತು ಕೃಷ್ಣನ್ ತಿಳಿಪೆ, ಒಡನೆ ಬಂದೆವು: ಮುಂದೆ
ಓಡಿಸಿದನ್ ಎನ್ನನ್ ಎಟ್ಟಿಱಿಸಲ್ಕೆ. ಪೋಗಿರಲ್ ಮುನ್ನಮೇ ಪೊಱಗೆ,
ಸತ್ತನ್ ಅಶ್ವತ್ಥಾಮನ್.–ಇಲ್ಲ, ಇದು ಕೃಷ್ಣನದು ಪೊಸತೊಂದು ತಂತ್ರಂ!
ಮೇಳನಾಯಕನ್ : ಅೞಲ ಮಗು, ಭಾರ್ಗವೀ, ಕೇಳ ಬಾ, ವಾರ್ತೆಯನ್.
ಶಾಂತಿ ಎಂಬುದು ನಮಗೆ ಇಲ್ಲೆಂದೆ ತೋಱುಗುಂ.
ಭಾರ್ಗವಿ : ಏಕಣ್ಣ, ಕೆಳರಿಪಿರ್, ಇದೆತಾನೆ ಮೇಲೆ ಮೇ
ಲೊತ್ತಿ ಒರ್ಪಟಿಲಿಂದೆ ಬಿಡುತೆಗೊಂಡಿರ್ದಳನ್?
ಮೇಳನಾಯಕನ್ : ಈತನ್ ಅಶ್ವತ್ಥಾಮನನ್ ಕುಱಿತು ವಾರ್ತೆಯನ್
ಕೆಟ್ಟುದನ್ ತಂದೆಮ್ಮ ಪೊಡೆಗೆ ಕಿರ್ಚಿಕ್ಕಿದನ್.
ಭಾರ್ಗವಿ : ಏನಪ್ಪ, ಮುಱುಗಿಪೋದೆವೊ ನಾಮ್? ಅದೇನ್, ಅಱಿಪು.
ದೂತನ್ : ಪೊಱಗವನ್ ಪೋಗಿರ್ದೊಡುೞಿವ ನಚ್ಚುಗೆ ಇಲ್ಲ.
ಭಾರ್ಗವಿ : ಪೋದನೇ!–ಏಕಿಂತು ನುಡಿವಯ್?
ದೂತನ್ : ಏಕಲವ್ಯನ್ ಪೇೞ್ದನ್–ಒಳಗಿರ್ಕೆ ಬೀಡಿನೊಳ್;
ಪೊಱಗೆ ತಾನೊರ್ವನೇ ಪೋಗಲಾಗದು ಎಂದು.
ಭಾರ್ಗವಿ : ಅವನೆಲ್ಲಿ ಏಕಲವ್ಯನ್? ಇಂತೇಕೆ ಪೇೞ್ವನ್?
ದೂತನ್ : ಬರುತಿರ್ಪನ್. ಈ ಪಗಲ್ ಪೊಱಗೆ ಸುೞಿಯಲ್ ಸಾವು
ನಮ್ಮ ವೀರಂಗೆಂದು ತಾನಾತನ್ ಒಣರ್ದಪನ್.
ಭಾರ್ಗವಿ : ಆಹ, ಇದು ನಿಶ್ಚಯಮೆ? ಆರ್ ಅವಂಗಱಿಪಿದರ್?
ದೂತನ್ : ದಿವ್ಯಜ್ಞಾನಿ, ಕೃಷ್ಣನ್. ಉೞಿವು, ಅೞಿವಿಂದೆಂದು.
ಭಾರ್ಗವಿ : ಕಾಪಾಡಿಂ, ಓ ಕೆಳೆಯಿರ್! ಬೀೞ್ವ ಸಿಡಿಲ್ ತಪ್ಪಿಸಿಂ!
ಇತ್ತಲ್ ಓಡಿಂ ಕೆಲರ್, ತರಲ್ ಏಕಲವ್ಯನನ್.
ಮೂಡಲ್ ಕೆಲಂಬರ್–ಪಡುವಲ್ ಕೆಲಂಬರ್.
ಅಱಿಸಿಮ್ ಆತನ ಪಜ್ಜೆ ಪೋದ ಪಾೞ್ ಪೊಲಂಗಳಂ.
ತಿಳಿದೆನ್ ಈಗಳ್–ಪುಸಿದು, ನಂಬಿಸಿ, ಕಟಿಲ್ಚಿದನ್.
ಪೞಿಯೊಲ್ಮೆಯನ್ ಬಿಸುಟನ್. ಅಯ್ಯೊ, ಮಗು, ಏವೆನ್?
ಕುಳ್ಳಿರಲ್ಕಾಗದು. ಆದನಿತು ಬೆನ್ನೊಳೇ ಬರ್ಪೆನ್.
ನಿಲ್ಲದಿರಿಂ, ಅಣ್ಣಂದಿರ್, ಓಡಿಂ. ತಡೆಯೆ ಪೊೞ್ತಿಲ್ತು, ಓ ನಲ್ಲಿರ್.
ಪಿಡಿಯಲ್ಕೆವೇೞ್ಕುಮೇ ಸಾಯಲ್ ಓಡುವನನ್! [ಪೋಪರ್]
[ಕುರುಕ್ಷೇತ್ರದ ಬೇಱೊಂದೆಡೆ ಕಾಡು]
ಅಶ್ವತ್ಥಾಮನ್ : ನಿಶ್ಚಲಂ ನಿಂದುದೀ ಕಟುಕನ್. ನಂಬತಕ್ಕುದು–ಮಗುೞ್ದು ಕೊಲ್ಗುಂ.
ನ್ಯಾಯಮೇ, ಪೊೞ್ತೆರಲ್ ನೆನೆಯಲ್ಕೆ. ಮೊದಲೆ ಇದು ಆ ಶತ್ರುಮಿತ್ರನ್
ಅಭಿಮನ್ಯು, ಎನ್ನ ಕಱುಬಾದವನ್, ಸಮಯುದ್ಧದೊಳ್ ಮೆಚ್ಚುಗೊಟ್ಟ
ಕೊಡಗೆ ತಾನ್; ಪೆಱನಾಡ ನೆಲದಲ್ಲಿ ನಾಂಟಿರ್ಕುಂ; ಪೊಸತು ಮಸೆದೀಗಳ್
ಮೊನೆಗೊಂಡ ಕೂರ್ಪಿನದು; ನೋಡಿ ನಟ್ಟೆನ್ ನಾನೆ, ಒಡನೆ ಸಾವೀಯಲ್.
ಸಿದ್ಧಮ್ ಆಮ್ ಇರ್ವರುಂ. ಓ ರುದ್ರ–ಪ್ರಾರ್ಥಿಪುದು ಸಾವರ್ಗೆ ಧರ್ಮಂ–
ಎನಗೊಳ್ಳೆಯವನಾಗು. ದೊಡ್ಡ ವರಮಲ್ತು ನಾನ್ ಬೇಡುವುದು ನಿನ್ನನ್.
ಈ ಬಾಳಮೇಲ್ ಬಿೞ್ದು ನೆತ್ತರನ್ ಬಸಿವನನ್, ಬಂದು ಮೊದಲ್ ಎತ್ತಲ್
ಏಕಲವ್ಯಂಗಱಿಪೆ, ಅಟ್ಟು ಆರಾನುಮನ್; ಪಗೆ ಮೊದಲ್ ಕಾಣಲ್,
ಎೞೆದಪರ್ ನಾಯ್‌ನರಿಗೆ ಪರ್ದುಗಳ್ಗೆರೆಯಾಗಿ. ಇದೊಂದು ಕೃಪೆದೋಱು.

ಓ ಅಗ್ನಿ, ಕರೆವೆನ್ ಆನ್, ಪಿತೃಲೋಕಕುಯ್ವೆ ನೀನ್ : ಸುಖನಿದ್ರೆಗೊಳಿಸು,
ಅಳ್ಕದೆಯೆ ನೆಗೆದೆನ್ನ ಕರುಳ್ಗಳೊಳ್ ಖಡ್ಗಮ್ ಇಱಿದೊಡನೆ–ಮೆಯ್ದಡವಿ.
ನಿಮ್ಮುಮನ್ ಕೂಗುವೆನ್, ಓ ಉಗ್ರಕನ್ನಿಕೆಯರ್, ಎಂದೆಂದುಂ ಇರ್ಪಿರ್,
ಎಂದೆಂದುಂ ಆಳ್ಗಳನ್ಯಾಯಮನ್, ರೋಷಮನ್, ನೋಡುತುಮೆ ಇರ್ಪಿರ್,
ಬಿಡದೆ ಬೆನ್ನೊಳೆ ಬಂದು, ಓ ಘೋರಮೂರ್ತಿಗಳ್, ಕಾಡುತುಮೆ ಇರ್ಪಿರ್,
ಇದೊ ನೋಡಿಮ್ ಓರೊರ್ವರ್ ಎಂತು ನಾಮ್ ಘಾತುಕರ ತಂತ್ರಕ್ಕೆ ತೊಡಕಿ,
ಕೈಗುಂದಿ ಬಿೞ್ದಪೆವು; ನಾನೆ ಕೊನೆ! ಪಿಳ್ಳೆ ಪೆಸರಿಲ್ಲಾಯ್ತು ಕೌರವಕುಲಶ್ರೀ!
ಬಿಡಬೇಡ, ಬಿಡಬೇಡ–ಬೆನ್ನಮರ್ದು ಗಿಡಿಯಿಮ್ ಅವರ್ಗವರವರ ಕರ್ಮಂ!
ಬನ್ನಿಮ್, ಏೞಿಂ, ಕ್ರೂರಮಾತೆಯರ, ರೌದ್ರಿಯರ, ಕಟ್ಟುಗ್ರಮ್ ಎಱಗಿಂ,
ತೀರಿಸಿಂ ನಿಮ್ಮ ಕೋಪಂಗಳನ್ ಪಾಂಡವರ ಸೇನೆಯೊಳಗೊಂದುೞಿಯಗುಡದೆ!
ನೀನುಂ, ಹಿರಣ್ಯ ರಥಮನ್ ಕೊಂಡು ಗಗನದೆತ್ತರಮಡರ್ವ ಓ ಸೂರ್ಯದೇವ,
ಎಮ್ಮ ಪಿರಿಯರ ನಾಡ ಮೇಲ್ನಿಂದು, ಮಲಯಗಿರಿಯೊಳ್ ಕುದುರೆಯೆೞೆದು,
ಪೇೞ, ಎನ್ನಿರ್ಕಡೆಯ ಬಳಗಕ್ಕೆ, ಎಳವೆಯೊಳಗೆನ್ನನ್ ಒಲ್ದರ್ಗೆ,
ಈ ಎನ್ನೞಲ್ಗಳನ್, ಪೆರ್ಮೆಬಗೆ ಸಾವನ್. ಆಹ, ಏನೊೞಲ್ವರ್
ಕೇಳ್ದೊರ್ ಈ ಕಥೆಯನ್! ಊರೇ ಮೊೞಂಗದೇ ಗೋಳಾಟಮಿಟ್ಟು!
ಸಾಲ್ಗುಂ, ಸಾಲ್ಗುಮ್ ಈ ಕನಿಕರಂ. ಕೆಲಸಂ, ಕೆಲಸಂ!–
ಮೃತ್ಯು, ಓ ಮೃತ್ಯೂ, ನೀನ್ ಬಾರ, ಬಾರಾ! ಇರಿರ್ ನಾನ್ ಬರ್ಪೆನ್
ನಿನ್ನ ಮರ್ಬಿನ ಮನೆಗೆ ಬಿರ್ದು. ನೀಮ್ ಎಲ್ಲಿ ಇನ್ನೆನಗೆ ಓ ಪೊಳೆವ ಪಗಲ
ಎಳಬಿಸಿಲೆ! ತೇರೊಳ್ ಏಱಿದ ಪೊೞ್ತೆ! ಇದುವೆ ಇಡೆ, ಕಡೆಯ ನುಡಿ ನುಡಿವೆನ್.
ಓ ಬೆಳಕೆ, ಓ ಪುಣ್ಯಭೂಮಿಯೇ, ಕನ್ನಡಮೆ, ಎನ್ನ ತಾಯ್ನಾಡೆ,
ನೆಲನ್ ಅಱಿವ ಬನವಾಸಿ, ತೆಂಗುಗಱಿ ಕೊಡೆಯಿರ್ಪ ಕಡಲುಲಿಯ ಮನೆಯೇ,
ಒಡನಾಡಿ ಪಸುಳೆಗಳೆ, ಕೆಱೆಗಳೆ, ಪೊನಲ್ಗಳೇ, ಓ ಪಸುರ ಬಯಲೆ,
ಬೀೞ್ಕೊಡಿಂ, ಬೀೞ್ಕೊಡಿಂ, ಎನಗೆ ಜೀವಾನಂದಮ್ ಆಗಿರ್ದರ್ ಎಲ್ಲರ್
ಬೀೞ್ಕೊಡಿಂ, ಪೋಗಿ ಬರ್ಪೆನ್. ಇದೆ ಕಡೆಯ ಮಾತೆನತು, ನಾನ್ ಪೋಗಿ ಬರ್ಪೆನ್.
ಮುಂದಣದು ಕೞಿದವರ ಕೂಟದೊಳ್–ಭಾರತದ ಸಂದ ಸಿಂಹಂಗಳ್,
ಕೌರವಸ್ವಾಮಿಯೊಳ್, ಕರ್ಣನೊಳ್, ಭೀಷ್ಮರೊಳ್, ಭೀಷ್ಮರೊಳ್, ತಂದೆ ಆ ಗುರುವೊಳ್.

[ಖಡ್ಗದ ಮೇಲೆ ಬೀೞ್ವನ್]

ಅರಮೇಳಂ ೧

ಅಲೆದೆನತ್ತ, ಅಲೆದೆನಿತ್ತ,
ಅಲೆಯದಿರ್ದ ಕಡೆಯದೆತ್ತ?
ತೊೞಲ್ದೆನಯ್ಯೊ, ಬೞಲ್ದೆನಯ್ಯೊ,
ಕಾಣೆನಯ್ಯೊ ಅವನದೆತ್ತ!
ಏನದು ಸದ್ದು! ಒಹೋ!

ಅರೆಮೇಳಂ ೨

ಒಹೋ!
ನಾವೆ, ನಾವೆ, ನಿಮ್ಮ ಸೋವೆ!

೧ : ಬೇಂಟೆ ಇಲ್ಲ?
೨ : ಪಡುವಲೆಲ್ಲ,
ಬಳಸಿ, ಬಳಸಿ, ಬಂದೆವೇ!
೧ : ಕಂಡುದಿಲ್ಲ?
೨ : ಇಲ್ಲ, ಇಲ್ಲ,

ತಡಕಿ, ತಡಕಿ, ನೊಂದೆವೇ!
೧ : ಪುಡಕಿ, ಪುಡುಕಿ, ಮೂಡಲೆಲ್ಲ
ಕಂಡೆವಿಲ್ಲ–ನೊಂದೆವೇ!
ಎಲ್ಲರುಂ : ಆರುಮ್ ಇಲ್ಲಮೆ ಎಮಗೆ ಪೇೞ್ವರ್?
ಕಾಡ ತುಱುಕಾಱನೋ, ಮಿಾನ್‌ಬಿಡಿವ ತೊೞೆಯನೋ,
ಮೇರುಗಿರಿಯಿನ್ ಪಾಱೆ ವಿಹರಿಸುವ ದೇವಿಯೋ,
ಆಡಿ ಸಾಗರನೆಡೆಗೆ ಸುೞಿವ ಪೊೞೆವೆಣ್ಡಿರೋ,
ಆರುಮ್ ಇಲ್ಲಮೆ ರುದ್ರನುರಿಗಣ್ಣನನ್ನನ್
ಎತ್ತಲ್ ಅಲೆವನೊ ಕಂಡು ಪೇೞ್ವರ್?
ಅಟ್ಟಿದುದು ಸೆಲೆಯಡಗಿತೀ ಬೇಂಟೆಸೋವು
ನೆಟ್ಟಗಾಗದೆ ಪೋಯ್ತು, ಬೞೆಯ ಮೆಯ್ನೋವು!
ಭಾರ್ಗವಿ : ಹಾ! ಎನ್ನ ಭಾಗ್ಯಮೇ!
೧ : ಅದಾರ ಕೂಗು ಪುೞಿಲ ನಡುವೆ ಕೇಳ್ವುದು?
ಭಾರ್ಗವಿ : ಕೆಟ್ಟೆನ್, ಕೆಟ್ಟೆನ್.
೨ : ನಮ್ಮ ಕೆೞವಿ, ಭಾಗ್ಯಹೀನೆ, ಭಾರ್ಗವಿ.
ಅವಳ ದುಃಖಮ್ ಎರ್ದೆಯನ್ ಇಱೆಯುತಿರ್ಕುಮೇ!
ಭಾರ್ಗವಿ : ಕೆಳೆಯಿರಾ, ಕೆಟ್ಟೆನ್, ಮುಱುಗಿದೆನ್, ಪಾೞಾದೆನ್, ಪೋದೆನ್.
ಮೇಳನಾಯಕನ್ : ಏನಾಯ್ತು, ತಾಯ್?
ಭಾರ್ಗವಿ : ನೋಡಿಮ್, ಅಶ್ವತ್ಥಾಮನ್! ಇದೊ, ಪೊಸತು ಕೊಲೆಪಟ್ಟು
ಈ ಖಡ್ಗಕೊೞೆಯಾಗಿ ಮುದಿರ್ದು ಬಿೞ್ದಿರ್ಪನ್.
ಮೇಳಂ : ಮನೆಗೆ ಮಗುಳ್ವಾಸೆ ಇನ್ನೇನ್!
ಓ ಗುರುವೆ ಕೊಂದೆ ನೀನ್ ಎನ್ನನ್.
ಓ ದುಡುಕಿನಾಳೇ!–ಎರ್ದೆಯೊಡೆದ ಪೆಣ್ಣೇ!
ಭಾರ್ಗವಿ : ಅವನದೇ ನೇರ್ಪು–ಎಮಗೞಲ ಕೂರ್ಪು.
ಮೇಳನಾಯಕನ್ : ಆರ ಕಯ್ ಮಾಡಿದುದೊ ಈ ಕೆಟ್ಟ ಕೊಲೆಯನ್?
ಭಾರ್ಗವಿ : ಆತನದೆ; ಇದೊ ನೋಡಿರಿ, ನಟ್ಟ ಬಾಳ್ ನೆಲದೊಳ್.
ಮೇಳಂ : ಓ ಎನ್ನ ಬೆಳ್ತನಮೆ, ಗಾಂಪೇ,
ಓ ಕುರುಡೆ, ಬುದ್ಧಿಯೊಳ್ ನುಣ್ಪೇ,
ಅಱೆಯದಾದೆನ್–ನಿನ್ನನ್ ಅಱೆಯದಾದೆನ್.
ಸಿರಿಯ ಕೆನ್ನೆತ್ತರನ್ ಸುರಿದಯ್!
ನಿನ್ನ ಛಲಮನ್ ತೀರ್ಚಿ ಸರಿದಯ್!
ಕಾಯದಾದೆನ್–ತಡೆದು ಕಾಯದಾದೆನ್.
ಮೇಳನಾಯಕನ್ : ಆ ಘೋರಸಂಕಲ್ಪನ್ ಎಲ್ಲಿ? ನೋೞ್ಪಂ.
ಭಾರ್ಗವಿ : ಇದು ಕಣ್ಗೆ ನೋಡಮೇ? ಬೇಡ. ಮೇಲುಡುಗೆಯಿನ್
ತಲೆಯಿಂದೆ ಕಾಲ್ವರಂ ಮುಸುಕುವೆನ್. ಒಲ್ದವರ್
ಆರ್ ತಾನೆ ನೋಡುವರ್ ಮೂಗಿನೊಳ್, ತಾನೆ ಇಱೆ
ದೇರ್ಗಳೊಳ್, ರಕ್ತಮನ್ ಉಗುಳ್ವುದನ್!–ಏನ್ ಮಾೞ್ಪೆನ್!
ಕೆಳೆಯರೊಳಗಾರ್ ನಿನ್ನನ್ ಎತ್ತುವನ್? ಎಲ್ಲಿರ್ಪನ್
ಏಕಲವ್ಯನ್? ಪೊೞ್ತತ್ತೆ ಇದು ಬರಲ್? ಓ ಕಂದ,
ದೈವಹತ ವೀರ ಅಶ್ವತ್ಥಾಮ! ಎಲ್ಲಿಂದೆ,
ಆವುದೊಂದೆಟ್ಟರದ ಪೆಂಪಿಂದೆ, ಎಲ್ಲಿಗುರುಳ್ದಯ್!

ನಿನ್ನನ್ ಈಗಳ್ ಕಂಡು ಮಱುಗುವರ್ ಪಗೆಗಳುಂ.
ಮೇಳಂ : ಕಡೆಗಾಗುವುದೆ ಆಗಿಪೋಯ್ತು!
ಮುನ್ನೆ ಅಱೆಯಲ್‌ಬರ್ಕುಮ್ ಆ ಬಗೆಯ ಪೇರುರ್ಕು
ಈ ಬಗೆಯ ಸಾವೊಳೇ ಕೊನೆಗಾಣ್ಗುಮೆಂಬುದು!
ನಿನ್ನೊಳ್ ಇರುಳುಂ ಪೊಗಸುಮ್ ಎಟ್ಟಿ ಪೊಗೆ ಗುಡುಗುಗಳಿನ್
ಆ ಬೇವ ಬೆಂಕೆ ಒಳಗೆನಿತಿರ್ಕುಮೆಂಬುದು!
ಕಡೆಗಾಗುವುದೆ ಆಗಿಪೋಯ್ತು!
ಬಲಿಯಾಯ್ತು ಭಾರತಕೆ ತಂದೆ ಮಕ್ಕಳ ಬರ್ದುಕು,
ಬಲಿಯಾಯ್ತು ಭಾರತಕೆ ನಮ್ಮ ಬರ್ದುಕು.
ಭಾರ್ಗವಿ : ಅಕ್ಕಟಾ, ಅಕ್ಕಟಾ!
ಮೇಳನಾಯಕನ್ : ಪೊಗೆಪೊಗೆದು ಪೊತ್ತುಗುಂ ದುಃಖಮಿದು, ಬಲ್ಲೆನ್ ಆನ್.
ಭಾರ್ಗವಿ : ಅಕ್ಕಟಾ, ಅಕ್ಕಟಾ!
ಮೇಳನಾಯಕನ್ : ಆರ್ಗೆ ಜೀವಂಬಿಡಿದೆ ಅವರ್ ಅಟೆಯೆ ಕಿಱೆದಟಲೆ?
ಭಾರ್ಗವಿ : ಇದು ನಿನಗೆ ಬಗೆಯೆಣಿಕೆ, ಎನಗೆ ಎರ್ದೆಬೆಂಕೆ.
ಮೇಳನಾಯಕನ್ : ಅಪ್ಪುದು, ತಾಯ್, ಅಪ್ಪುದು.
ಭಾರ್ಗವಿ : ಓ ಮಗುವೆ, ಓ ಮುದಿಯೆ, ಆರ ನೊಗಕೀಗಳ್,
ಆರ ಕೋಲ್ಗೀಗಳ್, ದುಡಿವ ತೊಟ್ಟಾತ್ತದೆವೋ!
ಮೇಳಂ : ಎಂತೊ, ಅದನ್ ಆರೊ ಬಲ್ಲರ್?
ಪಗೆಗಳ್ ಆರ್ ಮಱುಕಮನ್ ಬಲ್ಲರ್!
ದೇವತೆಗಳೇ ಕಾವರ್!–ಎಲ್ಲರನ್ ಕಾವರ್!
ಭಾರ್ಗವಿ : ದೇವತೆಗಳ್ ಒಲ್ಲದೆಯೆ ಎಮ್ಮ ಬಾಟು ಮುಱೆದುದೇ?
ಮೇಳನಾಯಕನ್ : ಅವರ್ ಇಟ್ಟ ಬೇಗೆಯೇ–ತಾಳ್ದುಕೊಳಲ್ ಅರಿಯದು!
ಭಾರ್ಗವಿ : ಇಂತಿದನ್ ಮಾಡುವುದೆ ಕೃಷ್ಣನೊಳ್ ಪ್ರೀತಿಯಿನ್
ಆ ಕೇಡಿಗನ್ ರುದ್ರನ್–ಎಮ್ಮ ಮನೆದೇವರ್!
ಮೇಳಂ : ನಗುವನ್ ಅಹ, ನಗುವನ್ ಅಹ, ಕೃಷ್ಣನ್!
ನಗವೇಡ ಎನುತುಂ ಆ ಕೃಷ್ಣನ್
ನಸುನಗುತೆ ಪೇಟ್ದನ್ ಈ ಭ್ರಮೆಯ ಕಥೆಯನ್.
ಗಹಗಹಿಸಿ ನಕ್ಕಪರ್
ಕೇಳ್ದು ಭೀಮಾರ್ಜುನರ್.
ಆಹ, ಎನ್ನೊಡೆಯ, ಏನ್ ಅಪಹಾಸ್ಯಮಾದಯ್.
ಭಾರ್ಗವಿ : ನಗುಗೆ, ಪಿರ್ಗುಗೆ, ನಲಿಗೆ, ಅಣಕಿಸುಗೆ, ಇವನಟಿಲ್ಗೆ
ಆ ಪಿರಿಯ ಸಜ್ಜನರ್! ಅವರ್ಗಿನಿದು, ಕಡಿದು ಎನ
ಗೀ ಸಾವು–ತನಗೆಯೋ ಬಲ್ ಸುಖಂ, ಬಲ್ ಸುಖಂ!
ಬಯಸಿದನ್ ಅದಾವುದನ್ ತಾನ್ ಅದನೆ ಕೈಕೊಂಡನ್
ತನ್ನ ಕಯ್ ಸಾವನ್. ಏಕವರ್ ಪಿರ್ಗುವರ್?
ಇವನಮೇಲೇನೆಂದು ಜರ್ಬು ಮಾತಾಡುವರ್?
ದೈವಕ್ಕೆ ಬಿಟ್ಟನ್ ಇವನ್–ಅವರಲ್ತು ಕೊಂದವರ್!
ಎಂದಿಂಗಮ್ ಅವರಲ್ತು. ನಗುಗೆ, ಕೃಷ್ಣನ್, ನಗುಗೆ!
ಈಗಳ್ ಅಶ್ವತ್ಥಾಮನ್ ಅವನ ಕಯ್ ಮೀಱೆದನ್.
ದುಃಖಕೆನ್ನನ್ ಬಿಟ್ಟು ಸುಖಕೆ ತಾನ್ ನಡೆದನ್.
[ಒಳಗೆ]

ಏಕಲವ್ಯನ್ : ಹಾ! ಹಾ!
ಮೇಳನಾಯಕನ್ : ಏಕಲವ್ಯನ್!
[ಏಕಲವ್ಯನ್, ದೂತನ್]
ಏಕಲವ್ಯನ್ : ಅಣ್ಣ, ಅಶ್ವತ್ಥಾಮ, ಗುರುಪುತ್ರ, ಗುರು, ಇನಿಯ,
ಒರ್ವನ್ ಎನ್ನನ್ ಬಿಟ್ಟು ನೀನಿಂತು ಪೋದೆಯಾ?
ಮೇಳಂ : ಪೋದನ್, ಪೋದನ್.
ಏಕಲವ್ಯನ್ : ನಾನೆ ನಿರ್ಭಾಗ್ಯನ್.
ಮೇಳಂ : ಎಲ್ಲರುಂ, ಎಲ್ಲರುಂ.
ಏಕಲವ್ಯನ್ : ಏನ್ ದುಡುಕು ಈತನದು!
ಮೇಳಂ : ಬಲ್ದುಡುಕು, ಬಲ್ದುಡುಕು.
ಏಕಲವ್ಯನ್ : ಮಗುವೆಲ್ಲಿ? ತಾಯೆ, ಧೈರ್ಯಂಗೊಳ್. ಮಗುವೆಲ್ಲಿ?
ಭಾರ್ಗವಿ : ಬೀಡಿನೊಳಗಾಡುವನ್.
ಏಕಲವ್ಯನ್ : ಒರ್ವನೆಯೆ? ಕೊಂಡು ಬಾ
ಪೋಗು, ತಾಯ್, ಬೇಗಂ. ಎತ್ತಿಕೊಂಡುಯ್ದಪರ್
ತಾಯ್ ಬಳಿಯೊಳ್ ಇಲ್ಲದಿರೆ, ಪಗೆಗಳ್ ಆರಾನುಂ ಆ
ಸಿಂಹದೆಳಮಱಿಯನ್. ನಡೆ, ಪೋಗು, ನೀನುಂ.
[ಭಾರ್ಗವಿಯುಂ ದೂತನುಂ ಪೋಪರ್]
ಸತ್ತರೊಳ್ ಪುರುಡಿಸುವ ಶೂರರ್ ಇರ್ಪರ್ ಕೆಲರ್.
ಮೇಳನಾಯಕನ್ : ಅಪ್ಪುದಪ್ಪುದು, ದೊರೆಯೆ. ನಿನ್ನೊಳ್ ಇಟ್ಟನ್ ಕೂಸನ್
ಅಱಿವ ಮುನ್ ಗುರುಪುತ್ತನ್ : ಅದಱಿಂತೆ ಕಾವಯ್.
ಏಕಲವ್ಯನ್ : ಎಲ್ಲಿ, ಮೇಲ್ಮುಸುಕುದೆಗೆ. ನೋಟ್ಪೆನ್ ಎನ್ನೊಲ್ದನನ್.
ಓ ಘೋರದರ್ಶನಮೆ! ಓ ಕ್ರೂರಕರ್ಮಮೇ!
ಬಿರಿಯದೆಂತಿರ್ಕುಮ್ ಎರ್ದೆ? ಕಣ್ಗಳಿರ, ಒಡೆಯಿರೇ?
ಏನಿರ್ಕುಮ್ ಇನ್ ಬಾಟೊಳ್? ಕಟ್ಟೊಲ್ಮೆ, ಕಲಿತನಂ,
ಅಡಿದೆಗೆಯದಾಳ್ತನಂ, ಸ್ವಾಮಿಯೊಳ್ ನೆಱೆಭಕ್ತಿ,
ಜಗಮನ್ ಅದಿರಿಪ ಶಕ್ತಿ–ಎಲ್ಲಮುಂ ಪೊಂದಿದುವು!
ಪೊಂದಿದುವು! ನಿನ್ನ ಸಿಡುಕದುವುಮ್ ಒರ್ಚೆಲ್ವನಗೆ,
ಓ ವೀರ, ಓ ರುದ್ರನವತಾರ, ಎನ್ನಿನಿಯ,
ಎನ್ನೊಡೆಯ, ಅಶ್ವತ್ಥಾಮ ಓ ಅಶ್ವತ್ಥಾಮ!
ಎನಗಿಂದೆ ಬೇಂಟೆಯೇ? ಇಂದೆ ವಿಧಿ ಸೆಳೆವುದೇ?–
ಇರ್ದುಮ್ ಏನ್? ವಿಧಿ ಮುಳಿಯೆ, ಆರಿರ್ದುಮ್ ಏನ್ ಮಾಟ್ಪರ್?
ಸಾಲ್ಗುಮ್ ಈ ಬಿಱುಗಾಣ್ಕೆ, ಮುಚ್ಚಿಂ, ಮುಚ್ಚಿಂ.
ಕೆಳೆಯರಿರ, ಇನ್ನೆಮಗೆ ತೆಂಕವಟೆ. ಪೋದಪೆವೆ
ಈ ಮೊಗದೊಳ್ ಅತ್ತಲುಂ? ಗೆಲವಿಲ್ಲ, ಗುರುವಿಲ್ಲ :
ಎಮ್ಮಯ್ಯನ್ ಏನೆನ್ಬನ್! ನೆಟಿಲಂತೆ ಪತ್ತಿರ್ದು
ಸೇವಿಸೆಂದಟ್ಟಿದನೆ! ನಗುತೆ, ಬಾ, ಎನ್ಬನೇ
ಏನುಮಿಲ್ಲದೆ ಸಿಡಿವ ಮುದುಕನ್ ಆ ಮುಂಗೋಪಿ?
ಸುಖದೊಳಂ ನಗದಾತನ್ ಏನನಾಡದೆ ಬಿಡುವನ್?
ತವರೂರೊಳ್ ಎನಗಿಂತು, ನೀನ್ ಸತ್ತು, ಓ ಕಳೆಯ,
ಇಲ್ಲಿಯೋ ಪಲ್ಮೊರೆವ ಪಗೆಗಳೇ–ನೆರಮಿಲ್ಲ.
ಇನ್ನಿರ್ಕುಮ್ ಒರ್ಕಡನ್–ಕಱೆದರದು. ಮಾಡುವಂ,

ಬನ್ನಿಂ; ಎಱೆಯಿಮ್ ಈ ದೇಹಮನ್ ಖಡ್ಗದಿನ್.
ನೋಡಮ್ ಈ ಖಡ್ಗಮನ್; ಅಭಿಮನ್ಯು ಕೊಟ್ಟುದಿದು.
ವ್ಯೂಹಮುಖದೊಳ್ ಪೊಣರ್ದು, ಸೋಲದೆಯೆ ಒರ್ವನುಂ,
ಪರಸಿ ಅಶ್ವತ್ಥಾಮನ್ ಎಳೆಯಂಗೆ ತನ್ನೊಲ್ದ
ಸುರಿಗೆಯನ್ ಕೊಟ್ಟನ್. ಆತನುಂ ತಲೆವಾಗಿ
ಈ ಖಡ್ಗದುಡುಗೊಱೆಯನ್ ಇತ್ತನ್. ವಿಚಿತ್ರಮ್ ಅದು
ವಿಧಿಯ ಗತಿ–ಅದೆ ಸುರಿಗೆ ಇಱಿದಱೆದನ್ ಅಂದೆ ಅವನ್,
ಇಂದಿವನ್, ಈ ಕೆಟ್ಟ ಖಡ್ಗದಿನ್. ಇದನ್ ಸಮೆದಳ್
ಆವಳೋ ಮಾರಿಯೇ! ಅದು ಯಮನ ಮಾಟಂ.
ಇದುವುಂ, ಇಂತೆಲ್ಲಮುಂ, ದೈವಮ್ ಒಡ್ಡಿದ ಬಲೆಗಳ್
ಆಳ್ಗಳ್ಗೆ. ಬೇಱೆ ಬಗೆವನ್ ಬಗೆಗೆ, ಎನ್ನ ಬಗೆ ಎನಗೆ!

ಮೇಳನಾಯಕನ್ : ಆಳ್‌ಸಿರಿಗೆ ಕಱುಬುವುದು ದೈವಂ; ಇದು ಪೊಸತಲ್ತು.–
ಇತ್ತಲ್ ಅವನೊ ಮದಿಸಿದಾನೆವೊಲ್ ತೂಗುತ್ತೆ
ಬಂದಪನ್.–ಭೀಮನೋ?

ಏಕಲವ್ಯನ್ : ಭೀಮನ್, ಸತ್ತರ್ಗೆ
ಪಾದಪೂಜೆಯನ್ ಎಸಪ ನಯಗಾಱನ್. ಬರ್ಕೆ, ಬರ್ಕೆ.

ಭೀಮನ್ : ಎಲವೆಲವೊ, ನಿಲ್, ನಿಲ್, ಆ ಪೆಣನನ್ ಎತ್ತದಿರ್, ಬಿಟ್ಟಿರ್ಕೆ.

ಏಕಲವ್ಯನ್ : ಏಕುಸಿರ್ ಕಳೆದಪಯ್? ಕೇಳ್ವ ತೊಟ್ಟುಗಳ್ ಇಲ್ಲ, ಇಲ್ಲಿ.

ಭೀಮನ್ : ಕೇಳೆಲವೊ, ನಾಡಾಡಿ. ನಿದ್ರೆಯೊಳೆ ಸೈನ್ಯಮನ್ ಕೊಲಬಗೆದ
ಘಾತುಕನ್, ರಾಕ್ಷಸನ್–

ಏಕಲವ್ಯನ್ : ಅವನೊ ರಾಕ್ಷಸಿಯಾಳ್ದನ್? ರಕ್ತಂ ಪೀರ್ದನ್?

ಭೀಮನ್ : ಈ ಭುಜದ ಗದೆಯ ಘಾಯಕೆ ಬೆದಱೆ, ಪೆಣ್ಣಂತೆ, ಮೂಲೆಯೊಳ್
ಸತ್ತವನ್ ಯುದ್ಧಧರ್ಮಮನ್ ಅಱೆಯನ್, ಆಚಾರ್ಯಸುತನೆಂಬನ್!

ಮೇಳನಾಯಕನ್ : ಓ, ಭೀಮ, ಧರ್ಮಮನ್ ಪೆಸರೆತ್ತಿ ಮಾಡದಿರ್ ಅಧರ್ಮಮನ್.

ಭೀಮನ್ : ನಮ್ಮ ದೇವರ್ ಬಂದು ಕಾಯದಿರೆ, ಅವನ ಕಯ್ ತಡೆಯದಿರೆ,
ಪಶುಗಳೊಳ್ ತೋಱದಿರೆ, ಅವನ್ ಈಗಳ್ ಎನಾದನ್, ಅದುವೆ ನಾಮ್–
ನಾಯ್‌ಪಾಲ್ ಶವಂಗಳ್! ನಾಯ್ಗಳ್ಗೆ, ನರಿಗಳ್ಗೆ, ಪರ್ದುಗಳ್ಗೆ
ಬಿರ್ದಿಕ್ಕಿ ಬಿಸುಡಿಪೆನ್. ಅದೆ ಅವನ್ಗೆ ತಕ್ಕ ಸಂಸ್ಕಾರಂ–
ಬಿಲ್ಲೆಱೆದದಾರನೋ ಬೆದಱೆಪುದು? ಗದೆಯ ಸವಿ ಕಾಣಾ?

ಏಕಲವ್ಯನ್ : ಅದೇನದೇನ್, ಆಡಾಡು, ಮತ್ತೊರ್ಮೆ ಕೇಳ್ದಪೆನ್. ಪರ್ದುಗಳ್ಗಿಡುವಾ?
ಧರ್ಮಮನೆ ಅಱೆಯನೇ ಆಚಾರ್ಯಸುತನಾಗಿ! ಧರ್ಮಮನ್ ಬಲ್ಲಯ್?
ಆಚಾರ್ಯರನ್ ಮಱೆಯೆ ಇನ್ನುಂ? ನಾಮೊಡನೆ ಕಲ್ತುದನ್ ನೆನೆವಾ?
ಪೆರ್ಕುಡಿಯ ಮಕ್ಕಳಿರ್ ನೀಮೆ ಇಂತಾಡುವೊಡೆ, ಕೀಳ್ಗಳ್ ಏನಪ್ಪರ್.
ಪೋ ಪೋಗು. ಅಬ್ಬರಿಸಿ, ಏಱೆಸದಿರ್ ಅಶ್ವತ್ಥಾಮನನ್.

ಭೀಮನ್ : ಏನ್ ಬಿಂಕಂ, ಕಾಡ ಬಿಲ್ಗಾಱನದು!

ಏಕಲವ್ಯನ್ : ಗದೆ ಬೀಸುವಂತಲ್ತು, ಭೀಮ,
ಬಿಲ್ವೆಸನ್. ನುಡಿಯಿಸಲ್ ಬಲ್ಲಂಗೆ ಬಿಲ್ಲೊಂದು, ಮೇಣ್ ಬೀಣೆಯೊಂದು.
ನಿನ್ನ ತಮ್ಮಂಗಾಗಿ ಗುರುಗೆ ಬೆರಲನ್ ಕೊಟ್ಟೆನ್. ಆದೊಡಂ, ನೋಡು,
ತೋಱುವೆನ್ ಬಿಲ್ಲೊಂದು ಮಾಟಮನ್.

ಭೀಮನ್ : ನಾಲಗೆಯೊ, ನಿನ್ನ ಬಿಲ್? ಸೊರ್ಕೆ!

ಏಕಲವ್ಯನ್ : ಧರ್ಮಮಿರ್ದ್ದೆಡೆ ಸೊರ್ಕೆ!

ಭೀಮನ್ : ಧರ್ಮಮೋ ಎನ್ನ ಕೊಲೆಗಾಱಂಗೆ ತಡೆದು
ಮೆಯ್ಯಾಗ್ಗಪು ನಿಲ್ವುದಿದು?
ಏಕಲವ್ಯನ್ : ನಿನ್ನ ಕೊಲೆಗಾಱನ್! ಕೊಂದುಮ್ ಎಂತಿರ್ಪಱಯ್?
ಭೀಮನ್ : ದೇವತೆಯ ದಯೆಯಿನ್. ಇಲ್ಲದೊಡೆ, ನಾನ್ ಸತ್ತ ಪೆಣಮೆ.
ಏಕಲವ್ಯನ್ : ಕಾದ ದೇವತೆಗಳ್ಗೆ ಕಡೆಗಣಿಸಿ ನಡೆಯದಿರ್.
ಭೀಮನ್ : ನಾನೆ ದೇವತೆಗಳ್ಗೆ ಮೆಯ್ಮಱೆತು ನಡೆವವನ್?
ಏಕಲವ್ಯನ್ : ಮತ್ತೆಂತು? ಉತ್ತರಕ್ರಿಯೆಗಳನ್ ತಡೆವೊಡೆ?
ಭೀಮನ್ : ಎಮಗವನ್ ಕಡುವೈರಿ–ಪಶುಗಳನ್, ಪೆಣ್ದಿರನ್,
ಮಕ್ಕಳನ್ ತಱಿದವನ್–ಪಡೆ ಶಪಿಸುತಿರ್ಪವನ್.
ಏಕಲವ್ಯನ್ : ಇದೊ ನೋಡು, ನಿನ್ನಿದಿರೆ ಕ್ರಿಯೆಗಳನ್ ಮಾಡುವೆನ್.
ಭೀಮನ್ : ಇದೊ ನೋಡು, ನಿನ್ನಿದಿರೆ ಪರ್ದುಗಳ್ಗೂಡುವೆನ್.
ಏಕಲವ್ಯನ್ : ಆಗದಯ್, ಆಗದಯ್ ನಿನ್ನಿಂದೆ, ನಾನ್ ಇರಲ್.
ಭೀಮನ್ : ನೀನ್ ತಡೆಯೆ, ಒಂದಲ್ತು, ಎರಡು ಶವಮ್ ಅಕ್ಕುಂ.
ಏಕಲವ್ಯನ್ : ನಿಜಂ ನುಡಿದೆ–ನಿನಗೆ ಬಾೞ್ ಬೇಡಮಾಯ್ತಕ್ಕುಂ.
ಭೀಮನ್ : ಬಡಪಾರ್ವರೊಳ್ ಬೆಳೆದು ಬಾಯ್ ಬಡಿವುದನ್ ಕಲ್ತೆ.
ಏಕಲವ್ಯನ್ : ನಾನ್ ಕಲ್ತೆನ್ ಆತ್ಮಮನ್.
ಭೀಮನ್ : ಆತ್ಮಮನ್! ಅನಾರ್ಯ!
ಏಕಲವ್ಯನ್ : ಅನಾರ್ಯನಾರ್, ಆರ್ಯನಾರ್? ನೋೞ್ಪಂ.
[ಯುದ್ಧಂ, ಭೀಮನನ್ ತಱುಬಿಕೊಂಡು ಪೋಪನ್]

೧

ಮೇಳಂ : ಪೊತ್ತಿದುವೆ, ಪೊತ್ತಿದುವೆ ನಿಷ್ಠುರದ ನುಡಿಗಳ್!
ಮೊತ್ತಮೊದಲ್ ಇನಿಯವೇ, ತುದಿ ನಂಜು, ನುಡಿಗಳ್!
ಒಂದು ನುಡಿ, ಒಂದು ಕಿಡಿ–ಕೊನೆಗೆ ಕಾಟ್ಕಿರ್ಚು:
ಬೀರರ್ ಇರ್ವರ್ ತೀಡೆ, ಬಿದಿರ ಮೆಳೆಗಿರ್ಚು.
ಮಾಡಿದವನ್ ಆರ್ ಮೊದಲ್ ಯುದ್ಧಮನ್, ಕಾಣೆನ್,
ಕೂಡಿರ್ಪರೊಳ್ ಕಲಹಮ್ ಒಡ್ಡಿದನ್, ಕಾಣೆನ್.
ಬೇಱೆ ಕಾರ್ಯಂ ತಗದೆ ಸಾಹಸಿಗನಾಳ್ಗೆ?
ಬೇಱೆ ಭೂಷಣಮ್ ಇರದೆ ಮಾನವನ ತೋಳ್ಗೆ?
ಓ ಪೊಲ್ಲ ಯುದ್ಧಮೇ,
ಎಂದು ನಿಲ್ವಯ್!
ಓ ತಾಯೆ ಶಾಂತಿಯೇ!
ಎಂದು ಗೆಲ್ವಯ್!

೨

ಪಲ್ ಮಸೆದು, ಕಲ್ ಮಸೆದು, ಬಾಳ್ ಮಸೆದು, ಪೊಂಚಿ,
ಬಗೆ ಮಸಗಿ, ಬಾಯ್ ಮಸಗಿ, ಕಯ್ ಮಸಗಿ, ಮುಂಚಿ,
ಪಡೆನೆರಪಿ, ಪಗೆಯುರಿಪಿ, ಕೊಲ್ವ ಮುನ್ ಪಿಡಿದು,
ಪೇರಾಟಿಕಿಕ್ಕರೇ ನರಕದೊಳ್ ಗಿಡಿದು,
ಯುದ್ಧಮನ್ ನೆಲಕೆ ಬಿತ್ತಿದ ಪರಮ ಪಾಪಿಯನ್!
ಸರ್ವದುರಿ ಪಲ್ಗಳನ್ ಬಿತ್ತಿದಾ ಪಾಪಿಯನ್!
ಆ ಪಾಪಿ ಕಿಡಿಸಿದನ್ ಚೆಲ್ವಾದ ಬಾಟ್ಕೆಯನ್
ಆಟಪಾಟಂಗಳನ್, ಪಲ ಸಿರಿಯ ಮಾಟ್ಕೆಯನ್;

ಓ ನಲವೆ, ಪೆಣ್ಣೊಲವೆ,
ನೀಮ್ ಪಾಱೆ ಪೋದಿರ್!
ಓ ಕೊಟಿಲೆ, ತಣ್ಣೆಟಿಲೆ,
ನೀಮ್ ದೂರಮಾದಿರ್!

೩

ಏಗಟೆಗೆ ಪುಟ್ಟಿದಳೊ ಅಗ್ನಿಯೊಳ್ ನಾರಿ,
ಕೃಷ್ಣೆಯವಳ್, ಆ ಚಂಡಿ, ಕೌರವರ ಮಾರಿ!
ಭಾರತದ ಸುಖದ ಕುಡಿ ಸುಟ್ಟು ಕರಿಕಾಯ್ತೆ!
ಆ ಬೆಂಕೆ ದ್ರೌಪದಿಗೆ ತನಗೆ ಸುಖಮಾಯ್ತೆ!
ಜಾಱಿದೊಡೆ ಕೌರವನ್ ತೊಟ್ಟಿರೊಳ್ ನಕ್ಕಳ್–
ಆ ಗಟೆಗೆ ದುಃಖಮನ್ ಪೊಕ್ಕಳ್–
ನಕ್ಕವಳನ್ ಎಟೆತರಿಸಿ, ಕಿಟ್ಟು ಸಿರಿಮುಡಿಯನ್
ಉರಿವೆಣ್ಣ ಮುಡಿಯನ್,
ತೊಟ್ಟಿ, ಬಾ, ಏಱೆಂದು ತೋಱಿದನ್ ತೊಡೆಯನ್;
[ಏಕಲವ್ಯನನ್ ತಱುಬಿಕೊಂಡು ಭೀಮನ್]
ಆ ತೊಡೆಯನ್ ಎಲೆ ಭೀಮ, ತೋಱಿದಾ ತೊಡೆಯನ್
ಮುಱಿದೆ ನೀನ್, ನುಡಿದಂತೆ ಮುಱಿದೆ ನೀನ್ ತೊಡೆಯನ್–
ಒದೆದೆ ಪೊನ್ ಮುಡಿಯನ್,
ಒದೆದೆ ಕೌರವನ ಸಿರಿಮುಡಿಯನ್.
ಮುಱಿದೊದೆದು, ಪುಡಿಯೊಳಗೆ ಪೊರಳ್ವ ನರಳ್ವೊಡೆಯನನ್,
ಪೊರೆದಾಳ್ದ ಕಡುನಲ್ಮೆಯೊಡೆಯನನ್
ಕಂಡು, ಕ್ರೋಧಂ ಪೊತ್ತಿ, ಕಿಡಿಯಾದನ್ ಈತನ್.
ಮರುಳ್ಗೊಂಡು ಕೊಲೆಗೆಯ್ದನ್ ಈತನ್.
ಪೇಸುತ್ತೆ ತನ್ನನೇ ಕೊಲೆಗೆಯ್ದನ್ ಈತನ್.
ಮಚ್ಚರಿಸಿ ಶವದಮೇಲ್ ತೀರಿಸಲ್ ಬಂದಯ್
ಇದೊ ಮತ್ತೆ ಯುದ್ಧಮನ್ ತಂದಯ್.
ಕರ್ಮಮ್ ಈ ಪರಿ ಮಱೆಗೆ ಮಱೆ ಇಕ್ಕುತಿರ್ಕುಂ.
ಕ್ಷಮೆಯಿಂದೆ ಸಮೆಯದಿರೆ ಮಱುಕೊಳಿಸುತಿರ್ಕುಂ.
ಓ, ಭೀಮ, ಓ, ಏಕಲವ್ಯಾ,
ಸಾಲದೇ ರಕ್ತದೊಳ್ ಸ್ನಾನಂ?
ಸಾಲದೇ ಈ ರಕ್ತಪಾನಂ?
[ಭಾರ್ಗವಿ, ರುದ್ರಶಕ್ತಿ, ದೂತನ್]
ನೋಡಿರೇ, ನೋಡಿರೇ, ನಿಮ್ಮ ಶೌರ್ಯದ ಫಲಂ!
ಗಂಡಾಗಿ ಪೆತ್ತುದಱ ನಿಮ್ಮ ವೀರ್ಯದ ಫಲಂ!
ಮಕ್ಕಳಿಲ್ಲದ ತಾಯ್ವಿರ್! ತಂದೆಯಿಲ್ಲದ ಮಕ್ಕಳ್!
ಮೃತ್ಯುದೇವತೆಯೊರ್ವಳ್ ಆನಂದಿಸಲ್ ತಕ್ಕಳ್!
ಕೇಳರೇ, ಕೇಳರೇ, ನಾನಾರ್ಗೆ ಪೇಟ್ವೆನ್!
ಏಕಲವ್ಯನ್ ಬೀಱೆ, ನಾನೆಂತು ಬಾಟ್ವೆನ್!
ಈ ದುಷ್ಟ ಭೀಮನನ್ ಕೆಡಪುವೆನ್, ಪೂಟ್ವೆನ್!
[ಕೃಷ್ಣನ್]

ಓ ಕೃಷ್ಣ, ಓ ಕೃಷ್ಣ, ಒಳ್ಪೊತ್ತಿನೊಳ್, ಬಂದೆ.
ಶಾಂತಿಯನ್ ಕಲಿಸು ಬಾ, ನಿಲಿಸು ಬಾ, ತಂದೆ.
ಭಾರತದೆ ಶಾಂತಿಯನ್ ನಿಲಿಸು ಬಾ, ಮುಂದೆ!
ಕೃಷ್ಣನ್ : ಏನ್ ಇದಣ್ಣಂದಿರ್? ಓ, ಇದಶ್ವತ್ಥಾಮನ್!
ಏಕಲವ್ಯಾ, ತಡಂ ಮಾಡಿದಯ್.
ಏಕಲವ್ಯನ್ : ದೈವೇಚ್ಛೆ!
ಕೃಷ್ಣನ್ : ಏನ್, ಭೀಮ? ನೀನ್ ಬಂದುದನ್ ಕಂಡು ಬಂದೆನ್.
ಬೀಡಿಂಗೆ ಕೇಳ್ವುದೇನಿದು ಕೂಗು!
ಭೀಮನ್ : ನೋಡು, ಕೃಷ್ಣ,
ಈ ಬೇಡಕುನ್ನಿ ಏನ್ ಬಗುಳ್ದಪನ್.
ಕೃಷ್ಣನ್ : ತೆಗೆ, ತೆಗೆ,
ಏಕಲವ್ಯನ್ ಶೂರನ್, ಗುರುಭಕ್ತನ್, ಧಾರ್ಮಿಕನ್.
ನಿನಗವನೊಳ್ ಏನ್ ಕಲಹಂ?
ಭೀಮನ್ : ಈ ಶವಮನ್ ಈಯನ್,
ಎನ್ನಾಜ್ಞೆಯನ್ ಮೀಱಿ, ಸಂಸ್ಕಾರಮ್ ಎಸಗುವನ್,
ಕೃಷ್ಣನ್ : ಕೆಳೆಯನೆಂಬನ್ ನುಡಿದು ಕೆಳೆಯಲ್ಲದೊರ್ಮಾತನ್
ಕೆಳೆಯನಿರಲಕ್ಕುಮೋ?
ಭೀಮನ್ : ಮರುಳಲ್ತು ನಾನ್; ನುಡಿಯ.
ನಿನ್ನಿಂದೆ ಕೆಳೆಯನ್ ಆರ್
ಕೃಷ್ಣನ್ : ಆ ರುದ್ರನಾ ಪರಮ
ನಾಜ್ಞೆಯಿನ್ ಪೇೞ್ದಪೆನ್. ಹೃದಯಮನ್ ಕಲ್‌ಮಾಡಿ
ತಡೆಯದಿರು ಸತ್ತಂಗೆ ನಡೆವ ಸಂಸ್ಕಾರಮನ್.
ದ್ವೇಷಮ್ ಎನಿತಿರ್ದೊಡಂ, ತುಱಿಯದಿರು ಧರ್ಮಮನ್.
ದ್ವೇಷಿಸಿದನ್ ಎನ್ನನ್ ಇವನ್–ಎನಗೆ ಬದ್ಧದ್ವೇಷಿ–
ಆದೊಡಂ ಗೌರವಂದೋಱುವೆನ್, ಕಲಿಗಳೊಳ್
ಕಲಿ ಎಂದು ಸಾಱುವೆನ್, ಅಭಿಮನ್ಯು ಅವನ್ ಒರ್ವನ್,
ಇವನ್ ಒರ್ವನ್–ಬೆಂಕೆಗಳ್–ಸಿಡಿಲ ಮಱಿಗಳ್–ರುದ್ರ
ನಂಶಂಗಳ್. ಇಂತಪ್ಪ ವೀರನನ್ ಕೆಡೆನುಡಿದು
ಲಜ್ಜೆಗೆಟ್ಟಪುದು ತರಮೆ ನಿನ್ನ ಪೆರ್ಮೆಯ ಕಲಿಗೆ?
ಓ ಭೀಮ, ದೇವತೆಯ ಕಟ್ಟಳೆಗಳ್–ಇವನಲ್ತು–
ನೀನ್ ಮೀಱುತಿರ್ಪುದು. ಕಲಿ ಸಾಯೆ, ಪಗೆಗಳುಂ
ಪೊಗೞ್ವುದದು ಶೀಲಂ–ನೋಯಿಸುವುದಲ್ತು.
ಭೀಮನ್ : ಎಮ್ಮೆಲ್ಲರಾ ದೈವಂ ಆ ರುದ್ರನ್ ಅವನೆ ಕಯ್ವಿಟ್ಟನ್.
ಕೃಷ್ಣನ್ : ಬಿಟ್ಟನೋ, ತೊಟ್ಟನೋ, ನಾಮೆಂತು ಕಂಡಪೆವು
ಆ ರುದ್ರಹೃದಯಮನ್? ಪರಿಶುದ್ಧನನ್ ಮಾಡಿ
ಆತ್ಮವನ್ ಸೆಳೆದನೆನ್ಬೆನ್.
ಭೀಮನ್ : ಪಗೆಯ ಕಡೆ ವಹಿಸಿ,
ನೀನೇ ಇದಿರ್ಚುವುದೆ ಎನ್ನನ್? ಓ ಕೃಷ್ಣ,
ದ್ರೌಪದಿಯ ದುಃಖಮನ್ ನೀನ್ ಬಲ್ಲೆ.
ಕೃಷ್ಣನ್ : ದುಃಖಮುಂ
ಕ್ರೋಧಮುಂ ಮಾಡುವುದು ಸಯ್ತಲ್ತು: ಇದೊ, ಸಾಕ್ಷಿ.

ಭೀಮನ್ : ಅದು ಪೋಕೆ: ಕೊಂಡುಯ್ವೆನ್ ಆ ಶಿರೋರತ್ನಮನ್.
ಕೃಷ್ಣನ್ : ಚಂಡಿಸದಿರಯ್, ಭೀಮ. ಪುತ್ರರತ್ನಂಗಳ್ಗೆ
ಈ ರತ್ನಮ್ ಒರ್ಪಡಿಯೆ?
ಭೀಮನ್ : ಇಂತಪ್ಪ ನೀಚರನ್ ಆ
ದೆಂತು ಸೈರಿಸುವುದೋ! ತುಟಿವುದುಂ ತಪ್ಪಲ್ತು.
ಕೃಷ್ಣನ್ : ಪೆಣ್ಣ ಕಣ್ಣೀರ್ ಕಂಡು ನೀನ್ ಇಂತು ಮೊರೆದಪಯ್.
ಈಗಳ್ಗೆ ಸೈರಿಸು—ಎನ್ನೊಡನೆ ಬಾ, ನಿಮಗೆ
ತೋಱುವೆನ್ ಶ್ರೇಯಮನ್.
ಭೀಮನ್ : ನೀನ್ ಇಂದು ಭೀಮನನ್
ಪೇಡಿಯನ್ ಮಾಡುವಯ್, ಇಂತಾಗೆ, ಜಯಮ್ ಎಲ್ಲಿ ನಮಗೆ?
ಕೃಷ್ಣನ್ : ಕೆಳೆಯಂಗೆ ಸೋಲ್ವುದೆ ಜಯಂ; ಕ್ಷಮೆಯೆ ತಾನ್ ಜಯಂ;
ಕ್ರೋಧಮನ್ ತುಟಿದಿಟ್ಟು, ಬಲ್ವಿಡಿದು ಧರ್ಮಮನ್,
ಬಗೆಯೊಡನೆ ಪೋರಾಡುವುದೆ ಜಯಂ. ಬಾ, ಭೀಮ,
ಸರ್ವರುಂ ಪೊಗಬುತಿರೆ, ಸತ್ಕರಿಸುವಂ, ಬಾರ,
ಪೂಜ್ಯನ್ ಅಶ್ವತ್ಥಾಮನನ್.
ಭೀಮನ್ : ಸತ್ತನೊಳ್ ಇದೇನ್ ಭಕ್ತಿ?
ನಿನ್ನ ಬಗೆಯನೆ ಅಜೆಯೆನ್ ಇನ್ನುಂ, ಕೃಷ್ಣ.
ಕೃಷ್ಣನ್ : ಓ ಮಿತ್ರ, ನಾನುಮ್ ಇಂತಾಗೆನೇ ಒಂದು ದಿನಂ?
ಭೀಮನ್ : ಒಳ್ಳಿತಿದು ನಿನ್ನೆಸಕಮ್, ಎನತಲ್ತು.
ಕೃಷ್ಣನ್ : ಧರ್ಮಮ್ ಅಕ್ಕೆ!
ಆರದಾದೊಡಮೇನೊ?
ಭೀಮನ್ : ನಿನ್ನೊಡನೆ ಪೋರಾಡೆನ್.
ನಿನ್ನಿಷ್ಟದಂತಕ್ಕೆ. ನಾನ್ ಕ್ಷಮಿಸಲಾಜೆನ್ ಈ
ಘೋರನನ್. ಬಾಟೊಳ್ ಎಂತಂತೆಯೇ ಸಾವಿನೊಳಂ
ಎನಗೆ ಪಗೆ ಇವನೊಳ್. [ಪೋಪನ್]
ಮೇಳನಾಯಕನ್ : ಓ ಕೃಷ್ಣ, ಧರ್ಮದೇವತೆಯೆ ನೀನ್! ಅಜೆಯದರ್
ದೂಱುವರ್. ನಾಮಿಂದು ಸತ್ಯಮನ್ ಕಂಡೊಮ್
ಕೃಷ್ಣನ್ : ಪಿಂದೆ ಪಗೆ, ಮುಂದೆ ಕೆಳೆ ನಿಮ್ಮೊಡನೆ ಕೂಡುವೆನೆ
ಸಂಸ್ಕಾರಕರ್ಮದೊಳ್? ವೀರಂಗೆ, ಧೀರಂಗೆ,
ರುದ್ರಾವತಾರಂಗೆ ಸೇವೆಯನ್ ಸಲಿಸುವಂ.
ಏಕಲವ್ಯನ್ : ಓ ಕೃಷ್ಣ, ಸ್ತೋತ್ರಾರ್ಹಮ್ ಈ ನಿನ್ನ ಸೌಜನ್ಯಮ್,
ನಿನ್ನ ಧರ್ಮಪ್ರೀತಿ. ಆ ಪಶುವಿನಂತಲ್ತು,
ಆ ಮತ್ತನ್ ಆ ದೈತ್ಯನಂತಲ್ತು, ನಿನ್ನ ನಡೆ,
ನಿನ್ನ ನುಡಿ. ಕರುಣದಿನ್ ಬಿಟ್ಟೆ ಪಗೆಯನ್ ಕಾದೆ,
ನಿನ್ನವರಿನ್. ಆದೊಡಂ ಪ್ರೇತಕರ್ಮಂಗಳೊಳ್,
ಓ ವಾಸುದೇವಾ—ನಿನ್ನನ್ ಎಮ್ಮೊಳ್ ಕೂಡೆ
ಅಳ್ಕುವೆನ್. ಪ್ರಿಯಮೊ ಅದು ಅಪ್ರಿಯಮೊ ಕೆಳೆಯಂಗೆ
ಅಜೆಯೆನ್ ಆನ್. ಈ ಒಂದಜೊಳ್ ಕ್ಷಮಿಸು, ಬೇಡುವೆನ್.
ಕೃಷ್ಣನ್ : ನಿಮ್ಮ ಸಂತೋಷಂ—ಎನ್ನಿಷ್ಟಮಲ್ತಿಲ್ಲಿ.
ನಿನ್ನ ತೀರ್ಪಿಂಗಿದೋ ತಲೆವಾಗಿ ಪೋಗುವೆನ್.
ತಂದೆಯನ್ ಮಿಾಜೆಸುಗೆ, ಈ ಕಂದನ್. ಭಾರ್ಗವಿ, ತಾಳ್ಮೆ ತಾಯ್,

ಕಲಿಗಳನ್ ಬಳೆಯಿಪುದೆ ನಿನ್ನ ಪಾಲ್ ನಲಿವು. [ಪೋಪನ್]
[ಭಾರ್ಗವಿ ತಲೆಯನ್ ಬಾಗಿ ಮಗುವನ್ ಕರೆದುಕೊಳ್ವಳ್]
ಏಕಲವ್ಯನ್ : ಏಟೆಮಿನ್, ಪೊಟ್ಟೇಜೆತಾಗಳೇ, ಏಟೆಂ.
ಎಡೆಯಾಯ್ದು ಕಲ್ಲಜೆಗೆ ಭೂಮಿಯನ್ ಕೀಟೆಂ.
ಗಂಗೆಗೊರ್ವನ್ ಪರಿಗೆ–ಅಗ್ನಿಗಿನ್ನೊರ್ವನ್.
ಆಯುಧಮನ್ ಎಲ್ಲಮನ್ ಬೀಡಿಂದೆ ತನ್ನಿಂ.
ಬಾ, ತಾಯೆ; ಬಾ, ಮಗುವೆ; ಕೆಳೆಯರಿರ, ಬನ್ನಿಂ.
ಮೆಯ್ಯಿಕ್ಕಿಟ್ಟು, ಕುರುಳಿಟ್ಟು ಭಕ್ತಿಯನ್ ತೋರ್ಪಂ.
ಇನ್ನುಮ್ ಆಹಾ! ಇವನ್ ರಕ್ತಮನೆ ಸೋರ್ವನ್.
ವೀರರೊಳ್ ವೀರಂಗೆ, ರುದ್ರಾವತಾರಂಗೆ,
ರುದ್ರನೊಳ್ ಪೋರ್ದಂಗೆ, ರುದ್ರನೊಳೆ ಸೇರ್ದಂಗೆ,
ಸೇವೆಯನ್ ಮಾಟ್ಪಿಂ,
ಪೂಜೆಯನ್ ಮಾಟ್ಪಿಂ.
ಮೇಳಂ : ಎಮ್ಮ ಕಾಡುಗಳೆಡೆಯ ಪಟ್ಟಿಯನ್ ಮುಟ್ಟಿ,
ಎಮ್ಮ ಬೆಟ್ಟದಮೇಲೆ ಕೋಯಿಲನ್ ಕಟ್ಟಿ,
ಸೇವೆಯನ್ ಮಾಟ್ಪಿಂ,
ಜಾತ್ರೆಯನ್ ಮಾಟ್ಪಿಂ.
ಎಲ್ಲರುಂ : ಜಯ್, ಅಶ್ವತ್ಥಾಮನ್!
ಜಯ್, ಅಶ್ವತ್ಥಾಮನ್!
ಮೇಳನಾಯಕನ್ : ಇಂದೇನೊ, ಮುಂದೇನೊ, ಮುನ್ನೆ ಆಳ್ ಕಾಣನ್.
ಬಂದುದನೆ ಕೊಂಡುಂಡು ತಾಳ್ದವನೆ ಜಾಣನ್.
ರುದ್ರನ್ ಒಲ್ದೊಡೆ ಉಟೆವು,
ಒಲ್ಲದೊಡೆ ಒಡನಟೆವು,
ತಟ್ಗಿ ನಡೆದೊಡೆ ರುದ್ರನ್ ಒಲ್ಲದೆಯೆ ಮಾಣನ್,
ಅಳವಜೆತು ನಡೆಯೆ ಶಿವನ್ ಒಲ್ಲದೆಯೆ ಮಾಣನ್.